ಜೆಎಸ್‌ಎಸ್ ಮಹಾವಿದ್ಯಾಪೀಠದ

ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ರಿ).

32, 11ನೇ ಬ್ಲಾಕ್, ಡಾ. ರಾಜಕುಮಾರ್ ರಸ್ತೆ

ಜೆಎಸ್‌ಎಸ್ ಬಡಾವಣೆ, ಮೊದಲ ಹಂತ, ಮೈಸೂರು – 570029

ದೂರವಾಣಿ ಸಂಖ್ಯೆ : 0821–2470798

ಇ–ಮೇಲ್: presidentjssmvpehbcs@gmail.com ವೆಬ್‌ಸೈಟ್: jssmvpehbcs.org

GSTIN: 29AABAJ3348QIZ2

2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ಆಹ್ವಾನ ಪತ್ರಿಕೆ

14 ಸೆಪ್ಟೆಂಬರ್ 2025, ಭಾನುವಾರ

ಬೆಳಗ್ಗೆ 10.00

ಸ್ಥಳ

ಸುವರ್ಣ ಮಹೋತ್ಸವ ಭವನ

ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ

ಮೈಸೂರು – 570 025

ಸೂಚನೆಗಳು

1. ಸದಸ್ಯರು ತಾವು ಚರ್ಚಿಸಬೇಕೆಂದಿರುವ ವಿಷಯಗಳನ್ನು ಲಿಖಿತ ಮೂಲಕ ಸಂಘಕ್ಕೆ 06/09/2025 ರೊಳಗಾಗಿ ಕಳುಹಿಸಿಕೊಡುವುದು.
2. ಸದಸ್ಯರುಗಳು ತಮ್ಮ ವಿಳಾಸ ಬದಲಾವಣೆಯಾಗಿದ್ದಲ್ಲಿ ಬದಲಾದ ವಿಳಾಸವನ್ನು ಲಿಖಿತ ಮೂಲಕ ಸಂಘದ ಕಛೇರಿಗೆ ತಿಳಿಸುವುದು.
3. ಇದುವರೆವಿಗೂ ಸಂಘದಿಂದ ಪಾಸ್ ಪುಸ್ತಕ ಹಾಗೂ ಗುರುತಿನ ಕಾರ್ಡನ್ನು ಪಡೆಯದ ಸದಸ್ಯರುಗಳು ಕಡ್ಡಾಯವಾಗಿ ಮೂರು (3) ಭಾವಚಿತ್ರಗಳನ್ನು ಸಂಘಕ್ಕೆ ತಲುಪಿಸಿ ಖುದ್ದಾಗಿ ಸಂಘದ ಕಛೇರಿಗೆ ಬಂದು ತಮ್ಮ ರಶೀತಿ ಹಾಜರುಪಡಿಸಿ ಪಾಸ್ ಪುಸ್ತಕ ಹಾಗೂ ಗುರುತಿನ ಕಾರ್ಡನ್ನು ಪಡೆಯುವುದು.
4. ಸಹಕಾರ ಸಂಘಗಳ ನಿಯಮ ಮತ್ತು ಸಂಘದ ಬೈಲಾ ತಿದ್ದುಪಡಿ ರೀತ್ಯಾ ಪ್ರವೇಶ ಧನ ರೂ 95/– ಬಾಕಿ ಷೇರು ಫೀ ರೂ 90/– ಮತ್ತು ಷೇರು ಧನ ರೂ 900/– ಒಟ್ಟು ರೂ 1,085/– ಗಳನ್ನು ಕೂಡಲೆ ಸಂಘಕ್ಕೆ ಪಾವತಿಸಿ ರಶೀತಿ ಪಡೆಯುವುದು. **ದಿನಾಂಕ 31.12.2025 ರೊಳಗೆ ಬಾಕಿ ಷೇರು ಫೀ ಮತ್ತು ಷೇರು ಧನವನ್ನು ಪಾವತಿಸದಿದ್ದ ಪಕ್ಷದಲ್ಲಿ ಸದಸ್ಯತ್ವವು ರದ್ದಾಗುವುದೆಂದು ಈ ಮೂಲಕ ಸದಸ್ಯರುಗಳ ಗಮನಕ್ಕೆ ತರಲಾಗುತ್ತಿದೆ.**
5. ನಿಯಮದ ಪ್ರಕಾರ ಸಂಘದ ಸದಸ್ಯರುಗಳು **ಕೆ.ವೈ.ಸಿ (Know Your Customer)** ದಾಖಲಾತಿಗಳನ್ನು ಸಂಘಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಸದಸ್ಯರುಗಳು ತಮ್ಮ ಭಾವಚಿತ್ರ, ಆಧಾರ್ ಕಾರ್ಡ್ ಪ್ರತಿ, ಸೇವಾ ದೃಢೀಕರಣ ಪತ್ರ ಮತ್ತು ಮೈಸೂರು ನಗರದಲ್ಲಿ ಸ್ವಂತ ಅಥವಾ ಕುಟುಂಬದವರ ಹೆಸರಿನಲ್ಲಿ ನಿವೇಶನ ಹೊಂದಿಲ್ಲದಿರುವ ಬಗ್ಗೆ ದೃಢೀಕರಣ ಪತ್ರ ಇತ್ಯಾದಿ ದಾಖಲಾತಿಗಳನ್ನು ಸಂಘದ ಕಛೇರಿಗೆ ಸಲ್ಲಿಸುವುದು.
6. ಕರ್ನಾಟಕ ಸರ್ಕಾರವು ಜಾರಿಗೊಳಿಸಿರುವ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2021ರ ರೀತ್ಯಾ, **ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗಲು ವಿಫಲರಾದ ಸದಸ್ಯರಿಗೆ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಹಕ್ಕು ಇರುವುದಿಲ್ಲ**. ಈ ನಿಯಮವನ್ನು ಇತ್ತೀಚೆಗೆ ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದರಿಂದ ಸದಸ್ಯರು ತಪ್ಪದೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಕೋರಿದೆ. ಇದಲ್ಲದೆ ಸಂಘವು ಮಹಾಸಭೆ ದಿನದಂದು ನಿರ್ವಹಿಸುವ ನೋಂದಣಿ ಪುಸ್ತಕದಲ್ಲಿ ತಮ್ಮ ಸದಸ್ಯತ್ವ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ ನಮೂದಿಸುವುದಲ್ಲದೇ ಕಡ್ಡಾಯವಾಗಿ ಸಹಿ ಮಾಡಬೇಕಾಗಿರುತ್ತದೆ.
7. ವಾರ್ಷಿಕ ಮಹಾಸಭೆಗೆ ಸದಸ್ಯರಲ್ಲದೆ, **ಸಹ–ಸದಸ್ಯರು/ನಾಮ ಮಾತ್ರ ಸದಸ್ಯರು ಹಾಗೂ ಅವರ ಕುಟುಂಬದ ಸದಸ್ಯರು ಅಥವಾ ಇತರರು ಹಾಜರಾಗಲು ಅವಕಾಶವಿರುವುದಿಲ್ಲ.**
8. ಸದಸ್ಯರು ಸಭೆಗೆ ಹಾಜರಾಗುವಾಗ ಗುರುತಿನ ಚೀಟಿ ಮತ್ತು ಆಹ್ವಾನ ಪತ್ರಿಕೆಯನ್ನು ಕಡ್ಡಾಯವಾಗಿ ತರಬೇಕು.
9. ಸದಸ್ಯರ ನೋಂದಣಿ ಪ್ರಕ್ರಿಯೆಯು ಬೆಳಗ್ಗೆ 9.00 ಗಂಟೆಗೆ ಪ್ರಾರಂಭವಾಗಲಿದೆ.

* * * *

ಗೌರವಾನ್ವಿತ ಸದಸ್ಯರೆ

2024–25ನೇ ಸಾಲಿನ ಸಂಘದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ 14.09.2025ರ ಭಾನುವಾರ ಬೆಳಗ್ಗೆ 10.00 ಗಂಟೆಗೆ** ಸಂಘದ ಅಧ್ಯಕ್ಷರಾದ ಶ್ರೀ ಕೆ. ಗಂಗಾಧರಪ್ಪ ಇವರ ಅಧ್ಯಕ್ಷತೆಯಲ್ಲಿ ವ್ಯವಸ್ಥೆಗೊಳಿಸಲಾಗಿದೆ.

ಮಾನ್ಯ ಸದಸ್ಯರೆಲ್ಲರೂ ಸಭೆಯಲ್ಲಿ ಭಾಗವಹಿಸಿ, ತಮ್ಮ ಸಲಹೆ ಸೂಚನೆಗಳನ್ನು ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಸ್ಥಳ : **ಸುವರ್ಣ ಮಹೋತ್ಸವ ಭವನ**
ಜೆಎಸ್ಎಸ್ ಕಾಲೇಜು, ಊಟಿ ರಸ್ತೆ
ಮೈಸೂರು – 570 025

ಸ್ಥಳ : ಮೈಸೂರು
ದಿನಾಂಕ : 14–09–2025

ಆಡಳಿತ ಮಂಡಳಿ ಅನುಮತಿ ಮೇರೆಗೆ
ಶ್ರೀ ದಿಲೀಪ ಎನ್.
ಕಾರ್ಯದರ್ಶಿ (ಪ್ರಭಾರ)

2025-30ರ ಅವಧಿಯ ಆಡಳಿತ ಮಂಡಳಿ ಸದಸ್ಯರು

ಕ್ರ. ಸಂ.	ಹೆಸರು	ಪದನಾಮ	ದೂರವಾಣಿ ಸಂ.
1.	ಶ್ರೀ ಕೆ. ಗಂಗಾಧರಪ್ಪ	ಅಧ್ಯಕ್ಷರು	9945464261
2.	ಶ್ರೀ ಆರ್.ಎಸ್.ನಂಜುಂಡಸ್ವಾಮಿ	ಉಪಾಧ್ಯಕ್ಷರು	9740536004
3.	ಪ್ರೊ ಜಿ.ಸಿ.ರಾಜಣ್ಣ	ನಿರ್ದೇಶಕರು	9449812326
4.	ಶ್ರೀ ಪುಟ್ಟರಾಜಪ್ಪ ಎಸ್.	ನಿರ್ದೇಶಕರು	9741033336
5.	ಶ್ರೀ ಮಹೇಶ್ ಡಿ.ಎಸ್	ನಿರ್ದೇಶಕರು	9535586566
6.	ಶ್ರೀ ನಟರಾಜು ಕೆ.ಎಂ	ನಿರ್ದೇಶಕರು	9481321040
7.	ಪ್ರೊ ಹೆಚ್.ಎಸ್.ನಾಗೇಂದ್ರಕುಮಾರ್	ನಿರ್ದೇಶಕರು	9945729991
8.	ಶ್ರೀ ಎಸ್. ನಂಜುಂಡಸ್ವಾಮಿ	ನಿರ್ದೇಶಕರು	9449791256
9.	ಶ್ರೀ ಕೆ.ಎಸ್. ಗೌರಿಶಂಕರಸ್ವಾಮಿ	ನಿರ್ದೇಶಕರು	9741452271
10.	ಡಾ.ಶಂಕರಯ್ಯ	ನಿರ್ದೇಶಕರು	9482229678
11.	ಶ್ರೀ ಗವಿಯಪ್ಪದೇವರು ಆರ್	ನಿರ್ದೇಶಕರು	9845541667
12.	ಶ್ರೀಮತಿ ವಿನುತ ಕೆ.ಜಿ.	ನಿರ್ದೇಶಕರು	8088604678
13.	ಶ್ರೀಮತಿ ಗಾಯತ್ರಿ ಎಸ್.	ನಿರ್ದೇಶಕರು	9901011626

ಕಾರ್ಯಸೂಚಿ

1. ಪ್ರಾರ್ಥನೆ
2. ಮೀಟಿಂಗ್ ನೋಟಿಸ್ ಓದಿ ರೆಕಾರ್ಡ್ ಮಾಡುವುದು
3. ಸ್ವಾಗತ
4. ಹಿಂದಿನ ಮಹಾಸಭೆ ನಂತರ ನಿಧನರಾದ ಸಂಘದ ಸದಸ್ಯರುಗಳಿಗೆ ಶ್ರದ್ಧಾಂಜಲಿ ಅರ್ಪಣೆ
5. 2023–24ನೇ ಸಾಲಿನ ವಾರ್ಷಿಕ ಮಹಾಸಭೆ ನಿರ್ಣಯಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿ ಮಂಡನೆ
6. 2024–25ನೇ ಸಾಲಿನ ವಾರ್ಷಿಕ ವರದಿ ಮತ್ತು 2025–26ನೇ ಸಾಲಿನ ಆಂಶಿಕ ವರದಿ ಮಂಡನೆ
7. 2024–25ನೇ ಸಾಲಿನ ಜಮಾ–ಖರ್ಚು, ಲಾಭ ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಆಡಳಿತ ಮಂಡಳಿಯ ಸಮಜಾಯಿಷಿಯನ್ನು ಅನುಮೋದಿಸುವುದು
8. ನಿರ್ದಿಷ್ಟ ಮೀಸಲು ನಿಧಿ ಮತ್ತು ಇತರೆ ನಿಧಿಗಳನ್ನು ಸೃಜಿಸುವುದು
9. 2024–25ನೇ ಸಾಲಿನ ನಿವ್ವಳ ಲಾಭ/ನಷ್ಟ
10. 2025–26ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕಾತಿ
11. 2026–27ನೇ ಸಾಲಿನ ಆಯವ್ಯಯ ಮಂಡಿಸುವುದು ಹಾಗೂ ಅನುಮೋದಿಸುವುದು.
12. ವಿಚಾರಣಾ ವರದಿ ಪರಿಗಣನೆ
13. ಕಾರ್ಯನಿರ್ವಹಣೆಯಲ್ಲಿ ಕೊರತೆಯೇನಾದರೂ ಇದ್ದರೆ ಅವುಗಳನ್ನು ಪರಿಶೀಲಿಸುವುದು ಹಾಗೂ ಅವುಗಳನ್ನು ಸರಿಪಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವುದು
14. ಮುಂದಿನ ಸಾಲಿಗಾಗಿ ಆಡಳಿತ ಮಂಡಳಿಯಿಂದ ಸಿದ್ದಪಡಿಸಲಾದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು
15. ಇತರೆ ಸಹಕಾರ ಸಂಘಗಳಲ್ಲಿನ ಸಂಘದ ಸದಸ್ಯತ್ವವನ್ನು ಅನುಮೋದಿಸುವುದು
16. ಅಧೀನ ಸಂಸ್ಥೆಯೇನಾದರೂ ಇದ್ದರೆ ಅವುಗಳ ವಾರ್ಷಿಕ ವರದಿ ಹಾಗೂ ಲೆಕ್ಕ ಪತ್ರಗಳ ಪರಿಶೀಲನೆ

17. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಸಂಬಂಧಿಕರುಗಳು ಸಂಘದ ನೌಕರರಾಗಿ ನೇಮಕಗೊಂಡಿದ್ದರೆ, ಅಂತಹ ನೌಕರರ ಪಟ್ಟಿಯನ್ನು ಪರಿಶೀಲಿಸುವುದು

18. ಸದಸ್ಯರುಗಳನ್ನು/ಸಹ–ಸದಸ್ಯರುಗಳನ್ನು ಸೇರಿಸಿಕೊಂಡಿರುವ ಮತ್ತು ತೆಗೆದು ಹಾಕಿರುವ ಬಗೆಗಿನ ಟಿಪ್ಪಣಿ

19. ಉಪನಿಯಮಗಳಿಗನುಸಾರವಾಗಿ ತರಬಹುದಾದ ಇತರೆ ಯಾವುದೇ ವಿಷಯಗಳನ್ನು ಅನುಮೋದಿಸುವುದು

20. ಆಡಳಿತಮಂಡಳಿ ಸಭೆಗಳ ಖರ್ಚುವೆಚ್ಚಗಳ ಪರಿಶೀಲನೆ

21. ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರುಗಳು ನಿರ್ವಹಿಸಿರುವ ಕರ್ತವ್ಯಗಳಿಗೆ ಮತ್ತು ಸಭೆಗಳಿಗೆ ಹಾಜರಾದ ಸಂಬಂಧ ಸಂದಾಯ ಮಾಡಿದ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆ, ಮತ್ತಿತರ ಭತ್ಯೆಗಳ ವಿವರ

22. ಮೀಸಲು ಮತ್ತು ಇತರೆ ನಿಧಿಗಳ ವಾಸ್ತವ ಬಳಕೆ

23. ಸಂಘದ ಠೇವಣಿಗಳನ್ನು ಹಾಗೂ ಹಣಕಾಸಿನ ವ್ಯವಹಾರಗಳನ್ನು ಸಹಕಾರ ಬ್ಯಾಂಕ್, ಷೆಡ್ಯೂಲ್ ಬ್ಯಾಂಕುಗಳಲ್ಲಿ ಹಾಗೂ ಋಃಋ ನಿಯಂತ್ರಣದಲ್ಲಿರುವ ಇತರೆ ಬ್ಯಾಂಕುಗಳಲ್ಲಿ ನಿರ್ವಹಿಸುವ ಕುರಿತು ಮಹಾಸಭೆಯು ಅನುಮೋದಿಸುವುದು

24. ವಿವಿಧ ನ್ಯಾಯಾಲಯಗಳಲ್ಲಿರುವ ವ್ಯಾಜ್ಯಗಳ ವಿವರ

25. ಸದಸ್ಯರುಗಳಿಂದ ಬಂದಿರುವ ಪತ್ರಗಳನ್ನು ಮಂಡಿಸುವುದು

26. ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು

27. ಅಧ್ಯಕ್ಷರ ಭಾಷಣ

28. ವಂದನಾರ್ಪಣೆ

4. ಹಿಂದಿನ ಮಹಾಸಭೆ ನಂತರ ನಿಧನರಾದ ಸಂಘದ ಸದಸ್ಯರುಗಳಿಗೆ ಶ್ರದ್ಧಾಂಜಲಿ ಅರ್ಪಣೆ

ಹೆಸರು ಹುದ್ದೆ ಮತ್ತು ವಿಳಾಸ	**ಸದಸ್ಯತ್ವ ಸಂಖ್ಯೆ**
ಶ್ರೀ ಅರುಣ ಬಿ.ವಿ ಸಹಶಿಕ್ಷಕರು, ಜೆಎಸ್‌ಎಸ್ ಪ್ರೌಢಶಾಲೆ, ನಾರ್ವೆ ಬೇಲೂರು, ಸಕಲೇಶಪುರ ತಾ॥, ಹಾಸನ ಜಿಲ್ಲೆ	1605
ಶ್ರೀ ರೇಣುಕಾಸ್ವಾಮಿ ಸಹಶಿಕ್ಷಕರು, ಜೆಎಸ್‌ಎಸ್ ಪ್ರೌಢಶಾಲೆ ಶ್ರೀನಿವಾಸಪುರ, ಮೈಲಸಂದ್ರ, ಬೆಂಗಳೂರು	1686
ಶ್ರೀ ಪಿ. ಸದಾಶಿವಯ್ಯ ನಿವೃತ್ತ ಅಧೀಕ್ಷರು, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಎಸ್‌ಎಸ್ ನಗರ, ಮೈಸೂರು	97 97
ಶ್ರೀ ಹೆಚ್.ಎಸ್ ನಾಗರಾಜ ನಿವೃತ್ತ ನಿರ್ದೇಶಕರು, MIS, Division ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು	3486
ಶ್ರೀಮತಿ ಸಿ.ಪಿ ನಿರ್ಮಲ ಮುಖ್ಯೋಪಾಧ್ಯಾಯರು, ಜೆಎಸ್‌ಎಸ್ ಪ್ರೌಢಶಾಲೆ ಸರಸ್ವತಿಪುರಂ, ಮೈಸೂರು	1405

ಮನವಿ :

ಮೇಲೆ ನಮೂದಿಸಿರುವ ದಿವಂಗತ ಸದಸ್ಯರಲ್ಲದೆ, ಸಂಘದ ಸದಸ್ಯರಾಗಿದ್ದು ನಿಧನರಾದವರ ಬಗ್ಗೆ ಮಾಹಿತಿಗಳಿದ್ದರೆ ಮಹಾಸಭೆಗೆ ಮುಂಚಿತವಾಗಿ ಅಥವಾ ಮಹಾಸಭೆ ವೇಳೆಯಲ್ಲಿ ಸಂಘದ ಕಛೇರಿ/ಸಭೆಗೆ ತಿಳಿಸಬೇಕೆಂದು ಕೋರಿದೆ.

2024–25ನೇ ಸಾಲಿನ ಮಹಾಸಭೆಯ ಕಾರ್ಯಸೂಚಿ ಬಗ್ಗೆ ಟಿಪ್ಪಣಿ

ಕ್ರ.ಸಂ.	ವಿವರ	ಟಿಪ್ಪಣಿ	ಪುಟ ಸಂಖ್ಯೆ
5	2023–24ನೇ ಸಾಲಿನ ವಾರ್ಷಿಕ ಮಹಾಸಭೆ ನಿರ್ಣಯಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿ ಮಂಡನೆ	ಮುದ್ರಿಸಲಾಗಿದೆ	0
6	2024–25ನೇ ಸಾಲಿನ ವಾರ್ಷಿಕ ವರದಿ ಮತ್ತು 2025–26ನೇ ಸಾಲಿನ ಆಂಶಿಕ ವರದಿ ಮಂಡನೆ	ಮುದ್ರಿಸಲಾಗಿದೆ	0
7	2024–25ನೇ ಸಾಲಿನ ಆಡಿಟ್ ಆದ ಜಮಾ–ಖರ್ಚು, ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಆಡಳಿತ ಮಂಡಳಿಯ ಸಮಜಾಯಿಷಿ ಅನುಮೋದಿಸುವುದು.	ಮುದ್ರಿಸಲಾಗಿದೆ	0
8	ನಿರ್ಧಿಷ್ಟ ಮೀಸಲು ನಿಧಿ ಮತ್ತು ಇತರೆ ನಿಧಿಗಳನ್ನು ಸೃಜಿಸುವುದು	ಮುದ್ರಿಸಲಾಗಿದೆ	0
9	2024–25ನೇ ಸಾಲಿನ ನಿವ್ವಳ ಲಾಭ/ನಷ್ಟ	ಮುದ್ರಿಸಲಾಗಿದೆ	0
10	2025–26ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕಾತಿ	ಮುದ್ರಿಸಲಾಗಿದೆ	0
11	2026–27ನೇ ಸಾಲಿನ ಆಯವ್ಯಯ ಮಂಡನೆ ಹಾಗೂ ಅನುಮೋದಿಸುವುದು	ಮುದ್ರಿಸಲಾಗಿದೆ	0
12	ವಿಚಾರಣಾ ವರದಿ ಪರಿಗಣನೆ	ಮುದ್ರಿಸಲಾಗಿದೆ	0
13	ಕಾರ್ಯನಿರ್ವಹಣೆಯಲ್ಲಿ ಕೊರತೆಯೇನಾದರೂ ಇದ್ದರೆ ಅವುಗಳನ್ನು ಪರಿಶೀಲಿಸುವುದು ಹಾಗೂ ಅವುಗಳನ್ನು ಸರಿಪಡಿಸಲು ಕ್ರಮವಹಿಸುವುದು	ಮುದ್ರಿಸಲಾಗಿದೆ	0

14	ಮುಂದಿನ ಸಾಲಿಗಾಗಿ ಮಂಡಳಿಯಿಂದ ಸಿದ್ಧಪಡಿಸಲಾದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು	ಮುದ್ರಿಸಲಾಗಿದೆ	0
15	ಇತರೆ ಸಹಕಾರ ಸಂಘಗಳಲ್ಲಿನ ಸಂಘದ ಸದಸ್ಯತ್ವವನ್ನು ಅನುಮೋದಿಸುವುದು	ಯಾವುದೂ ಇಲ್ಲ	–
16	ಅಧೀನ ಸಂಸ್ಥೆಯೇನಾದರೂ ಇದ್ದರೆ ಅವುಗಳ ವಾರ್ಷಿಕ ವರದಿ ಹಾಗೂ ಲೆಕ್ಕ ಪತ್ರಗಳ ಪರಿಶೀಲನೆ	ಅಧೀನ ಸಂಸ್ಥೆಗಳು ಯಾವುದೂ ಇಲ್ಲ	–
17	ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಸಂಬಂಧಿಕರುಗಳು ಸಂಘದ ನೌಕರರಾಗಿ ನೇಮಕಗೊಂಡಿದ್ದರೆ, ಅಂತಹ ನೌಕರರ ಪಟ್ಟಿಯನ್ನು ಪರಿಶೀಲಿಸುವುದು	ಸಮಿತಿ ಸದಸ್ಯರ ಸಂಬಂಧಿಗಳಾರು ನೇಮಕವಾಗಿರುವುದಿಲ್ಲ	–
18	ಸದಸ್ಯರುಗಳನ್ನು / ಸಹ ಸದಸ್ಯರುಗಳನ್ನು ಸೇರಿಸಿಕೊಂಡಿರುವ ಮತ್ತು ತೆಗೆದು ಹಾಕಿರುವ ಬಗೆಗಿನ ಟಿಪ್ಪಣಿ	ಈ ಅವಧಿಯಲ್ಲಿ ನೂತನ ಸದಸ್ಯರಾಗಿ ಏಳು ಜನ ಸದಸ್ಯರು ಸೇರ್ಪಡೆ ಯಾಗಿದ್ದಾರೆ. ಮತ್ತು ನಿಧನರಾದ ಸದಸ್ಯರುಗಳ ನಾಮಿನಿದಾರರನ್ನು ಸಹಸದಸ್ಯರನ್ನಾಗಿ ನೇಮಿಸಿಕೊಳ್ಳಲಾಗಿದೆ.	–
19	ಉಪನಿಯಮಗಳಿಗನುಸಾರವಾಗಿ ತರಬಹುದಾದ ಇತರೆ ವಿಷಯಗಳನ್ನು ಅನುಮೋದಿಸುವುದು	ಯಾವುದೂ ಇಲ್ಲ	–
20	ಆಡಳಿತಮಂಡಳಿ ಸಭೆಗಳ ಖರ್ಚುವೆಚ್ಚಗಳ ಪರಿಶೀಲನೆ	ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಸಭೆ ಸಂದರ್ಭ ಗಳಲ್ಲಿ ಊಟ–ತಿಂಡಿ ವೆಚ್ಚವಾಗಿ 49,816/– ರೂ. ವೆಚ್ಚವಾಗಿರುತ್ತದೆ.	–

21	ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರುಗಳು ನಿರ್ವಹಿಸಿರುವ ಕರ್ತವ್ಯಗಳಿಗೆ ಮತ್ತು ಸಭೆಗಳಿಗೆ ಹಾಜರಾದ ಸಂಬಂಧ, ಸಂದಾಯ ಮಾಡಿದ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆ, ಮತ್ತಿತರ ಭತ್ಯೆಗಳ ಬಗ್ಗೆ	ವಿವರ ಮುದ್ರಿಸಲಾಗಿದೆ	0
22	ಮೀಸಲು ಮತ್ತು ಇತರೆ ನಿಧಿಗಳ ವಾಸ್ತವ ಬಳಕೆ.	ವಿವರ ಮುದ್ರಿಸಲಾಗಿದೆ	–
23	ಸಂಘದ ಠೇವಣಿಗಳನ್ನು ಹಾಗೂ ಹಣಕಾಸಿನ ವ್ಯವಹಾರಗಳನ್ನು ಸಹಕಾರ ಬ್ಯಾಂಕ್, ಷೆಡ್ಯೂಲ್ ಬ್ಯಾಂಕುಗಳಲ್ಲಿ ಹಾಗೂ ಆರ್‌ಬಿಐ ನಿಯಂತ್ರಣ ದಲ್ಲಿರುವ ಇತರೆ ಬ್ಯಾಂಕುಗಳಲ್ಲಿ ನಿರ್ವಹಿಸುವ ಕುರಿತು ಮಹಾಸಭೆಯ ಅನುಮೋದನೆ	ವಿವರ ಮುದ್ರಿಸಲಾಗಿದೆ	0
24	ವಿವಿಧ ನ್ಯಾಯಾಲಯಗಳಲ್ಲಿರುವ ವ್ಯಾಜ್ಯಗಳ ವಿವರ	ವಿವರ ಮುದ್ರಿಸಲಾಗಿದೆ	0
25	ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು		–
26	ಅಧ್ಯಕ್ಷರ ಭಾಷಣ		–
27	ವಂದನಾರ್ಪಣೆ		–

05. a) 2023–24ನೇ ಸಾಲಿನ ವಾರ್ಷಿಕ ಮಹಾಸಭೆ ನಿರ್ಣಯಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿ ಮಂಡನೆ

ಹಿಂದಿನ ಸಭೆ ನಡಾವಳಿ	ತೆಗೆದುಕೊಂಡ ಕ್ರಮಗಳು
ನಕಲಿ ರಶೀತಿ ಪುಸ್ತಕ ಮುದ್ರಣ ಕುರಿತು	ಸಂಘದ ನೌಕರರಾಗಿದ್ದು, ಸೇವೆಯಿಂದ ವಜಾಗೊಂಡಿರುವ ಶ್ರೀ ಬಿ.ಪಿ. ಜಗದೀಶ್ ಮತ್ತು ಶ್ರೀ ಕೆ. ರಾಜೇಂದ್ರ ಇವರೀರ್ವರು ನಕಲಿ ರಶೀದಿಗಳನ್ನು ಸೃಷ್ಠಿಸಿ ಸಂಘದ ಹಣ ದುರುಪಯೋಗ ಮಾಡಿರುವುದು ಏಕ ಸದಸ್ಯ ವಿಚಾರಣಾ ಸಮಿತಿಯಿಂದ ಸಾಬೀತಾಗಿರುತ್ತದೆಯಲ್ಲದೆ ಅವರುಗಳು ತಪ್ಪೊಪ್ಪಿಗೆ ಹೇಳಿಕೆಗಳನ್ನು ಸದರಿ ವಿಚಾರಣಾ ಸಮಿತಿಗೆ ನೀಡಿರುತ್ತಾರೆ. ಇವರೀರ್ವರ ವಿರುದ್ಧ ಉದಯಗಿರಿ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯು ದಾಖಲಾಗಿದ್ದು (FIR ಸಂಖ್ಯೆ 0054/2023 ದಿನಾಂಕ 19.4.2023) ವಿಚಾರಣೆ ಪ್ರಗತಿಯಲ್ಲಿದೆ. ಸಂಘದ ಆಂತರಿಕ ಲೆಕ್ಕಪರಿಶೋಧನಾ ವರದಿಯಿಂದ ಇವರೀರ್ವರಿಂದ ದುರುಪಯೋಗವಾಗಿರುವ ಮೊತ್ತ 55,71,550/–ರೂ. ವಸೂಲಿಗೆ ಸಹಕಾರ ಸಂಘಗಳ ಕಾಯಿದೆ 1959 ಕಲಂ 70ರಡಿ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಬೆಂಗಳೂರು–560052 ಇವರ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ: ಅನಿ(ವ&ಇ)/ಡಿ2/ಎಂಡಿ/94/2024–25 ದಾಖಲಾಗಿ ವಿಚಾರಣೆಯು ಪ್ರಗತಿಯಲ್ಲಿದೆ. ಇಲಾಖಾ ನ್ಯಾಯಾಲಯವು ಶ್ರೀ ಕೆ. ರಾಜೇಂದ್ರರವರಿಗೆ ನೀಡಿರುವ ನೋಟೀಸ್ ಜಾರಿಯಾಗದೆ ವಾಪಸ್ ಹೋಗಿದ್ದರಿಂದ ವಿಜಯವಾಣಿ ದಿನ ಪತ್ರಿಕೆಯಲ್ಲಿ ನೋಟೀಸ್ ಪ್ರಕಟಣೆಯಾಗಿರುತ್ತದೆ. ಮುಂದಿನ ವಿಚಾರಣೆಯು ದಿನಾಂಕ: 25.08.2025ಕ್ಕೆ ನಿಗದಿಯಾಗಿದೆ.
ಪೂರ್ಣಾವಧಿ ಕಾರ್ಯದರ್ಶಿ ನೇಮಕಾತಿ	ಇದಕ್ಕೆ ಸಂಬಂಧಿಸಿದಂತೆ ನಿಕಟಪೂರ್ವ ಆಡಳಿತ ಮಂಡಳಿಯು ನಡೆಸಿದ ಪ್ರಕ್ರಿಯೆಯು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960ರ ನಿಯಮ 17, 17(ಎ) ಮತ್ತು 18ರ ರೀತ್ಯಾ ಇಲ್ಲವೆಂದ ಕಾರಣ ಹೊಸದಾಗಿ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಅದರಂತೆ ನಿಕಟಪೂರ್ವ ಆಡಳಿತ ಮಂಡಳಿಯು ಒಂದು ಹೊಸ ನೇಮಕಾತಿ ಸಮಿತಿಯನ್ನು ರಚನೆ ಮಾಡಿತ್ತು. ಫೆಬ್ರವರಿ 2025ರಂದು ಚುನಾವಣೆ ನಡೆದು ಪ್ರಸ್ತುತ ಆಡಳಿತ ಮಂಡಳಿ ರಚನೆಯಾಗಿರುತ್ತದೆ. ಪ್ರಸ್ತುತ ಆಡಳಿತ ಮಂಡಳಿಯು ಹೊಸ ನೇಮಕಾತಿ ಸಮಿತಿಯನ್ನು ರಚಿಸಿ ಮುಂದಿನ ಕ್ರಮಕ್ಕಾಗಿ ಪ್ರಸ್ತಾವನೆಯನ್ನು ಇಲಾಖೆಗೆ ಕಳುಹಿಸಲಾಗಿರುತ್ತದೆ.

ನಾಲ್ಕನೇ ಹಂತದ ಬಡಾವಣೆ ಅಭಿವೃದ್ಧಿಗೆ ಏರ್ಪಡಿಸಿ ಕೊಂಡಿರುವ MoU ನವೀಕರಣ	ನಿಕಟಪೂರ್ವ ಆಡಳಿತ ಮಂಡಳಿಯು ನಾಲ್ಕನೇ ಹಂತದ ಅಭಿವೃದ್ಧಿದಾರರಾದ M/s ESS & ESS Eco Valley Inc., ರವರಿಗೆ MOU ನವೀಕರಣ ಸಂಬಂಧ ಹಲವಾರು ಬಾರಿ ಪತ್ರಗಳ ಮುಖೇನ ಕೋರಲಾಗಿತ್ತು. ಅಲ್ಲದೆ ಪ್ರಸ್ತುತ ಆಡಳಿತ ಮಂಡಳಿಯು ದಿನಾಂಕ: 17.06.2025 ಪತ್ರದ ಮುಖೇನ MOU ನವೀಕರಣ ಮಾಡಿಕೊಡುವಂತೆ ಕೋರುವ ಜೊತೆ ಹಲವಾರು ಬಾರಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶ್ರೀಕಾಂತದಾಸ್‌ರವರನ್ನು ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳ ತಂಡ ಭೇಟಿಯಾಗಿ MOU ನವೀಕರಣಕ್ಕಾಗಿ ಕೋರಲಾಗಿದೆ. ಆದಾಗ್ಯೂಕೂಡ ಇದುವರೆವಿಗೂ ಸದರಿಯವರಿಂದ ಯಾವುದೇ ಪ್ರತ್ಯುತ್ತರ ಸಂಘಕ್ಕೆ ಬಂದಿರುವುದಿಲ್ಲ. 2010–15ರ ಆಡಳಿತ ಮಂಡಳಿಯು ದಿನಾಂಕ: 09.06.2011ರಂದು ಶ್ರೀ ಶ್ರೀಕಾಂತ್‌ದಾಸ್ ರವರು ವ್ಯವಸ್ಥಾಪಕ ನಿರ್ದೇಶಕರಾಗಿರುವ ಸಂಸ್ಥೆ M/s ESS & ESS Eco Valley Inc.,ರವರ ಜೊತೆಗೆ Turn key ಆಧಾರದ ಮೇಲೆ 61,20,000 ಚದರಡಿ ವಿಸ್ತೀರ್ಣದ ವಿವಿಧ ಅಳತೆಗಳ ಸುಮಾರು 3000 ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಚದರಡಿಗೆ ರೂ 423/–ರಂತೆ ಒಟ್ಟು 258,87,60,000/– ಮೊತ್ತಕ್ಕೆ ಕೊಳ್ಳಲು ಒಪ್ಪಂದ ಮಾಡಿಕೊಂಡು ಈ ಅವಧಿಯಲ್ಲಿ ಒಟ್ಟು ರೂ 106,74,20,000/– ಪಾವತಿ ಮಾಡಿದೆ. ದಿನಾಂಕ: 09.06.2011ರಂದು ಮಾಡಿಕೊಂಡ MOU ಅವಧಿಯು 08.06.2014 ರಂದು ಮುಕ್ತಾಯವಾಗಿತ್ತು. 2015–20ರ ಅವಧಿಯ ಆಡಳಿತ ಮಂಡಳಿಯು ದಿನಾಂಕ 24.01.2016ರಂದು 1 ವರ್ಷದ ಅವಧಿಗೆ ಮಾತ್ರ MOU Renewal ಮಾಡಿಕೊಂಡಿದ್ದು ತದನಂತರ ಆಡಳಿತ ಮಂಡಳಿಯಾಗಲೀ 2020–25ರ ಅವಧಿಯ ಆಡಳಿತ ಮಂಡಳಿಯಾಗಲೀ MOU Renewal ಮಾಡಿಕೊಳ್ಳಲಾಗಲಿಲ್ಲ. ನಿಕಟಪೂರ್ವ ಆಡಳಿತ ಮಂಡಳಿಯು ಹಲವಾರು ಬಾರಿ ಪತ್ರಗಳ ಮುಖಾಂತರ MOU Renewal ಗೆ ಕೋರಿಕೆ ಸಲ್ಲಿಸಿದ್ದರೂ ಅವರಿಂದ ಯಾವುದೇ ಉತ್ತರ ಇದುವರೆವಿಗೂ ಬಂದಿರುವುದಿಲ್ಲ. ನಿಕಟ ಪೂರ್ವ ಆಡಳಿತ ಮಂಡಳಿಯ ದಿನಾಂಕ: 15.09.2024ರಂದು ನಡೆದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ MOU ಸಂಬಂಧ ವಿಸ್ತೃತ ಚರ್ಚೆಯಾಯಿತು. ಚರ್ಚೆಯಲ್ಲಿ ಭಾಗವಹಿಸಿದ ಪ್ರೊ ಜಿ.ಸಿ ರಾಜಣ್ಣನವರು (ನಿಕಟಪೂರ್ವ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ 2010–15ರ ಅವಧಿಯ ಆಡಳಿತ ಮಂಡಳಿಯ ಅಧ್ಯಕ್ಷರು) ನಾಲ್ಕನೇ ಹಂತದ ಬಡಾವಣೆಯ ಕರಾರು ಒಪ್ಪಂದವು ತಮ್ಮ ಅಧ್ಯಕ್ಷತೆಯಲ್ಲಿ ಆಗಿರುವುದರಿಂದ, ಒಂದು ವೇಳೆ ಅಭಿವೃದ್ಧಿದಾರರು ಮೋಸ

	ಮಾಡಿದರೆ ತಾವೇ ಸಂಪೂರ್ಣ ಜವಾಬ್ದಾರರೆಂದು ಜೊತೆಗೆ ನಾಲ್ಕನೇ ಹಂತದ ಬಡಾವಣೆಯ MOU Renewal ಮತ್ತು ಇತರ ಅಭಿವೃದ್ಧಿ ಕೆಲಸಗಳನ್ನು ತ್ವರಿತಗತಿಯಲ್ಲಿ ಆಗುವಂತೆ ಪ್ರಯತ್ನಿಸುವುದಾಗಿ ಸಭೆಗೆ ತಿಳಿಸಿದರು. ಅದರಂತೆ ನಿಕಟಪೂರ್ವ ಆಡಳಿತಮಂಡಳಿ ಮತ್ತು ಪ್ರಸಕ್ತ ಆಡಳಿತ ಮಂಡಳಿಯು ಸರ್ವ ಪ್ರಯತ್ನವನ್ನು ಮಾಡಲಾಗಿದ್ದರೂ ಫಲಪ್ರದವಾಗದೇ ಉಳಿದಿರುತ್ತದೆ.
ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯದ ದಿನಾಂಕ 26.6.2020 ಮತ್ತು KAT ದಿನಾಂಕ 08.08.2024ರ ಆದೇಶಕ್ಕೆ ಸಂಘವು ಮೇಲ್ಮನವಿ ದಾಖಲಿಸಿರುವುದು	ಸಂಘವು ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯ ಮತ್ತು KAT ಆದೇಶಗಳ ವಿರುದ್ಧ ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದಲ್ಲಿ ದಿನಾಂಕ: 17.12.2024ರಂದು Writ Petition No 34949, 34953, 34957, 34958, 34960-2024 ದಾಖಲಿಸಿದ್ದು. ಮುಂದುವರೆದು ARCS ನ್ಯಾಯಾಲಯ ಆದೇಶದನ್ವಯ ನಿವೇಶನ ನೋಂದಣಿ ಮಾಡಿಕೊಡುವಂತೆ ಸದಸ್ಯರು ಮತ್ತು ಸಹ–ಸದಸ್ಯರು ಸ್ಥಳೀಯ ವಿವಿಧ ನ್ಯಾಯಾಲಯಗಳಲ್ಲಿ ದಾಖಲಿಸಿದ್ದ ದಾವೆಗಳಿಗೆ ದಿನಾಂಕ: 27.01.2025ರಂದು ತಡೆಯಾಜ್ಞೆ ದೊರೆತಿದೆ. ಈ ವ್ಯಾಜ್ಯವನ್ನು ಆದಷ್ಟು ಬೇಗ ಕಾನೂನಾತ್ಮಕವಾಗಿ ಬಗೆಹರಿಸಲು ಪ್ರಸ್ತುತ ಆಡಳಿತ ಮಂಡಳಿಯು ಕ್ರಮವಹಿಸಿದೆ. ಸದರಿ ವ್ಯಾಜ್ಯಗಳನ್ನು ಸಂಘದ ಪರವಾಗಿ ವಕೀಲರಾದ ಶ್ರೀ ಪಿ.ಆನಂದ್‌ರವರು ನಿರ್ವಹಿಸುತ್ತಿದ್ದಾರೆ.
ಮೂರನೇ ಹಂತದ ಬಡಾವಣೆ ಅಭಿವೃದ್ಧಿದಾರರಾದ M/s ಶಾಂಭವಿ ಡೆವಲಪರ್ಸ್‌ರವರ ವಿರುದ್ಧ ಕಾನೂನು ಕ್ರಮ ಜರುಗಿಸುತ್ತಿರುವುದು	2015–20ರ ಸಂಘದ ಆಡಳಿತ ಮಂಡಲಿಯು M/s ಶಾಂಭವಿ ಡೆವಲಪರ್ಸ್ ರೊಂದಿಗೆ ದಿನಾಂಕ:24.02.2016ರಂದು ಸಂಘವು ಖರೀದಿಸಿದ್ದ 40 ಎಕರೆ 4¾ ಗುಂಟೆ ಜೊತೆಗೆ 20ಎಕರೆ ಹೆಚ್ಚುವರಿ ಜಮೀನನ್ನು ಖರೀದಿಸಿ 3ನೇ ಹಂತದ ಬಡಾವಣೆಯನ್ನು ನಿರ್ಮಿಸಿಕೊಡಬೇಕೆಂದು ಕರಾರು ಒಪ್ಪಂದವನ್ನು ಮಾಡಿಕೊಂಡು ಸದರಿ ಆಡಳಿತ ಮಂಡಳಿಯ ಅವಧಿಯಲ್ಲಿ ಒಟ್ಟು 14,84,39,770/–ರೂಗಳನ್ನು ಪಾವತಿಮಾಡಿತ್ತು, ಆದರೆ ಅಭಿವೃದ್ಧಿದಾರರು ಕೇವಲ 20 ಎಕರೆ 31 ಗುಂಟೆ ಜಮೀನಿನಲ್ಲಿ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಿ ಅರ್ಧಕ್ಕೆ ನಿಲ್ಲಿಸಿದ್ದರು. ಹೆಚ್ಚುವರಿ ಜಮೀನನ್ನೂ ಕೂಡ ಖರೀದಿಸಿರಲಿಲ್ಲ. ಆದ ಕಾರಣ ಇವರ ವಿರುದ್ಧ Commercial suit ಅನ್ನು ದಾಖಲಿಸಲಾಗಿತ್ತು. ತೀರ್ಪಿನ ಪ್ರಕಾರ M/s ಶಾಂಭವಿ ಡೆವಲಪರ್ಸ್‌ರವರು ಸಂಘದಿಂದ ಹೆಚ್ಚುವರಿಯಾಗಿ ಹಣ ಪಡೆದಿದ್ದು ಬಡ್ಡಿ ಸಮೇತ ರೂ 9.06 ಕೋಟಿಯನ್ನು ಸಂಘಕ್ಕೆ ದಿನಾಂಕ:19.06.2024 ರೊಳಗೆ ಹಿಂದುರುಗಿಸಬೇಕಾಗಿತ್ತು. ಆದರೆ

	ಈ ಅವಧಿಯೊಳಗೆ ಹಣ ಸಂಘಕ್ಕೆ ಜಮೆಯಾಗಿಲ್ಲದ ಕಾರಣ ಸದರಿಯವರ ವಿರುದ್ಧ ಸಂಘವು Execution Pettition No:Com.Ex/296/2024 ದಾಖಲಿಸಿರುತ್ತದೆ. ಪ್ರಕರಣದ ಕೆಲವು ಪ್ರತಿವಾದಿಗಳಿಗೆ ನೋಟಿಸ್ ತಲುಪದ ಕಾರಣ ನ್ಯಾಯಾಲಯವು ನೋಟಿಸ್‌ನ್ನು ಮರು ಜಾರಿಗೊಳಿಸಿದೆ. ದಿನಾಂಕ: 18.08.2025ಕ್ಕೆ ಮುಂದಿನ ವಿಚಾರಣೆಯು ನಿಗಧಿಯಾಗಿರುತ್ತದೆ. ಈ ವ್ಯಾಜ್ಯದ 5ನೇ ಪ್ರತಿವಾದಿಯಾದ ಶ್ರೀ ಯೋಗಾನಂದರವರು Commercial Court ನೀಡಿರುವ ಡಿಕ್ರಿಯನ್ನು Set aside ಮಾಡಬೇಕೆಂದು, ತಾವು ನ್ಯಾಯಪರತೆ ಮತ್ತು ಸಮಭಾಗಿತ್ವದ ಅಡಿಯಲ್ಲಿ ಈ ತೀರ್ಪನ್ನು Contest ಮಾಡಲು ಅವಕಾಶ ಮಾಡಿಕೊಡಬೇಕೆಂದು Principal District and Sessions Judge Mysore ನ್ಯಾಯಾಲಯದಲ್ಲಿ ವ್ಯಾಜ್ಯ ಸಂಖ್ಯೆ: Com.Mis.05/2024 ಅನ್ನು ದಾಖಲಿಸಿದ್ದಾರೆ. ಈ ವ್ಯಾಜ್ಯಗಳನ್ನು ಸಂಘದ ಪರವಾಗಿ ವಕೀಲರಾದ ಶ್ರೀ ಸಿ.ನಾಗೇಶ್ ರವರು ನಿರ್ವಹಿಸುತ್ತಿದ್ದಾರೆ. ಮುಂದುವರಿದು M/s Shambhavi Developers ರವರ ವಿರುದ್ಧ Cheque Bounce ಪ್ರಕರಣಕ್ಕೆ ಸಂಬಂಧಿಸಿದಂತೆ 5th ACJ & JMFC ನ್ಯಾಯಾಲಯದಲ್ಲಿ ದಾವಾ ಸಂಖ್ಯೆ CC No 2309/2021 ದಾಖಲಿಸಿದ್ದು, ಮುಂದಿನ ವಿಚಾರಣೆಯು ದಿನಾಂಕ: 16.09.2025 ರಂದು ನಿಗಧಿಯಾಗಿರುತ್ತದೆ.
ನಾಲ್ಕನೇ ಹಂತದ ಅಭಿವೃದ್ಧಿದಾರರಾದ M/s ESS & ESS Eco Valley Inc., ರವರಿಂದ ಬರಬೇಕಾದ TDS ಹಣ ಸಂಗ್ರಹಣೆ ಕುರಿತು	M/s ESS & ESS Eco Valley Inc., ರವರಿಂದ ಬರಬೇಕಾದ TDS ಬಾಬ್ತು ಹಣ 1,56,40,480/– ರೂಗಳನ್ನು ಸಂಘದಿಂದ ಪಾವತಿ ಮಾಡಲಾಗುವ ಮುಂಗಡ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಸಂಘವು ಕ್ರಮವಹಿಸಲಿದೆ.
ಐದನೇ ಹಂತದ ಬಡಾವಣೆ ಅಭಿವೃದ್ಧಿಗೆ M/s Vastava ರವರಿಗೆ ಸಂಘವು ಬಿಡುಗಡೆ ಮಾಡಿದ್ದ 3.75 ಕೋಟಿ ರೂ ಪೂರ್ಣವಾಗಿ ಸಂಘಕ್ಕೆ ಹಿಂದಿರುಗಿದೆ. ಆದಾಗ್ಯೂ ಈ ಮುಂಗಡ ಹಣದ ಮೇಲಿನ ಬಡ್ಡಿ ವಸೂಲಾತಿಗಾಗಿ ಕ್ರಮ ಕೈಗೊಂಡಿರುವ ಕುರಿತು.	ಐದನೇ ಹಂತದ ಬಡಾವಣೆ ಅಭಿವೃದ್ಧಿಗೆ M/s Vastava ರವರಿಗೆ ಸಂಘವು ಬಿಡುಗಡೆ ಮಾಡಿದ್ದ 3.75 ಕೋಟಿ ರೂ ಪೂರ್ಣವಾಗಿ ಸಂಘಕ್ಕೆ ಹಿಂದಿರುಗಿದೆ. ಆದಾಗ್ಯೂ ಈ ಮುಂಗಡ ಹಣದ ಮೇಲಿನ ಬಡ್ಡಿ ವಸೂಲಾತಿಗಾಗಿ ಮೆ. ವಾಸ್ತವ ಡೆವಲಪರ್ಸ್ ಇವರ ವಿರುದ್ದ ಸೀನಿಯರ್ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ OS1231/2023 ಮೈಸೂರು ಇಲ್ಲಿ ಸಂಘವು ಮೊಕದ್ದಮೆ ದಾಖಲಿಸಿದ್ದು, ಮುಂದಿನ ವಿಚಾರಣೆಯು ದಿನಾಂಕ: 22.08.2025ಕ್ಕೆ ನಿಗಧಿಯಾಗಿರುತ್ತದೆ.

b) ಆದಾಯ ತೆರಿಗೆ ಇಲಾಖೆ ಪ್ರಕರಣಗಳು

ಈ ಕೆಳಕಂಡ ಆದಾಯ ತೆರಿಗೆ ಇಲಾಖೆ ಪ್ರಕರಣಗಳ ಇತ್ಯರ್ಥಕ್ಕೆ ಸಂಘವು ತೆಗೆದುಕೊಂಡಿರುವ ಕ್ರಮಗಳು

Financial Year	Details
2008-09	Appeal Pending at CIT (Appeals)
2009-10	Appeal Pending at CIT (Appeals)
2010-11	Appeal Pending at CIT (Appeals)
2011-12	Appeal Pending at CIT (Appeals)
2012-13	Writ Petition pending before Karnataka High Court

2020–25ನೇ ಸಾಲಿನ ಆಡಳಿತ ಮಂಡಳಿ ಅವಧಿಯಲ್ಲಿ ಇತ್ಯರ್ಥಗೊಂಡಿರುವ ಪ್ರಕರಣಗಳ ವಿವರಗಳು:

Financial Year	Details
2013-14	Order passed Tax Amount Refundend
2014-15	Tax Amount Refundend
2015-16	Order Passed U/s 148 and No Demand
2016-17	Order Passed U/s 143(3) and demand paid
2017-18	Appeal Order Passed No Demand
2018-19	Order Passed U/s 143(3) and demand paid
2019-20	Return Accepted and No Demand
2020-21	Return Accepted and No Demand
2021-22	Return Accepted and No Demand
2022-23	Return Accepted and No Demand
2023-24	Return Accepted and Tax Amount Refundend

* ಆದಾಯ ತೆರಿಗೆ ಇಲಾಖಾ ನೋಟಿಸ್ ಅನ್ವಯ AY 2014-15 ಸಾಲಿಗೆ 2,64,18,760/–ರೂ. ಆದಾಯ ತೆರಿಗೆ ಬಾಕಿ ಇತ್ತು. ಇದನ್ನು ಇತ್ಯರ್ಥ ಪಡಿಸಲು ಸಂಘದ ಲೆಕ್ಕಪರಿಶೋಧಕರಾದ ಶ್ರೀ ಹೆಚ್.ಸಿ. ಮಂಜುನಾಥ್‌ರವರು ಆದಾಯ ತೆರಿಗೆ ತಜ್ಞರು ಹಾಗೂ ವಕೀಲರಾದ ಶ್ರೀ ಪಾರ್ಥ ಸಾರಥಿ ರವರ ಸೇವೆಯನ್ನು ಪಡೆದು ಆದಾಯ ತೆರಿಗೆ ಇಲಾಖಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿತ್ತು. ಸಂಘದ ಮೇಲ್ಮನವಿಯನ್ನು ಆದಾಯ ತೆರಿಗೆ ಇಲಾಖೆಯು ಪುರಸ್ಕರಿಸಿ ದಿನಾಂಕ: 06.02.2025ರಂದು ರೂ 51,22,350/–ಗಳನ್ನು (Tax amount 35,57,182/- and Interest amount 15,65,168/-) ಸಂಘಕ್ಕೆ Refund ಮಾಡಿರುತ್ತದೆ.
* 2019–20, 2020–21, 2021–22, 2022–23 ಮತ್ತು 2023–24 ಹಣಕಾಸು ವರ್ಷಗಳಲ್ಲಿ ಸಂಘವು ಆದಾಯ ತೆರಿಗೆ Returnsನ್ನು ನಿಗಧಿತ ಅವಧಿಯೊಳಗೆ ಸಲ್ಲಿಸಲಾಗಿದ್ದು, ಇದನ್ನು ಆದಾಯ ತೆರಿಗೆ ಇಲಾಖೆ ಒಪ್ಪಿಕೊಂಡಿರುತ್ತದೆ. ಅಲ್ಲದೆ 2023–24ನೇ ಸಾಲಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯಿಂದ ರೂ 2,79,025/– ಸಂಘಕ್ಕೆ ಪುನರ್ ಸಂದಾಯ (Refund) ಆಗಿರುತ್ತದೆ.

06. 2024–25ನೇ ಸಾಲಿನ ವಾರ್ಷಿಕ ವರದಿ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ಸ್ಥಾಪಿತವಾದ ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 7ರ ಅನ್ವಯ ದಿನಾಂಕ: 16/10/1975 ರಂದು Reg.No.JRM/RCS/699/1975 ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರಿಂದ ನೋಂದಾಯಿಸಲ್ಪಟ್ಟಿರುತ್ತದೆ. ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ಹಾಗೂ ತಮ್ಮೆಲ್ಲರ ಸಹಕಾರದಿಂದ ಈ ಗೃಹ ನಿರ್ಮಾಣ ಸಹಕಾರ ಸಂಘವು ಸದಸ್ಯರ ಹಿತಾಸಕ್ತಿಗನುಗುಣವಾಗಿ ಕಾರ್ಯೋನ್ಮುಖವಾಗಿದೆ.

1. **ಕಾರ್ಯವ್ಯಾಪ್ತಿ**

   ಸಂಘದ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿರುತ್ತದೆ.

2. **ಅಧಿಕೃತ ಪಾಲು ಬಂಡವಾಳ**

   ಸಂಘದ ಬೈಲಾ ಪ್ರಕಾರ ಸಂಘವು ಸದಸ್ಯರಿಂದ ಸಂಗ್ರಹಿಸಬಹುದಾದ ಅಧಿಕೃತ ಷೇರು ಬಂಡವಾಳ ರೂ.2.00,00,000/–(ಎರಡು ಕೋಟಿ) ನಿಗದಿಪಡಿಸಲಾಗಿದೆ.

3. **ಸದಸ್ಯತ್ವ ಮತ್ತು ಷೇರು ಬಂಡವಾಳ**

   ಸಂಘದಲ್ಲಿ 31.03.2025ರ ಅಂತ್ಯಕ್ಕೆ 3698 ಸದಸ್ಯರು ಮತ್ತು 2051 ಸಹ–ಸದಸ್ಯರು ನೋಂದಾಯಿತರಾಗಿದ್ದಾರೆ. ಈ ಸದಸ್ಯರುಗಳಿಂದ ಪಡೆಯಲಾಗಿರುವ ಷೇರು ಬಂಡವಾಳದ ಒಟ್ಟು ಮೊತ್ತ 2024–25ನೇ ಸಾಲಿನ ಆಸ್ತಿ–ಜವಾಬ್ದಾರಿ ತಃಖ್ತೆ ರೀತ್ಯಾ 41,95,530/– ರೂ ಆಗಿರುತ್ತದೆ.

4. **ಅಪದ್ಧನ ಹಾಗೂ ಇತರೆ ನಿಧಿಗಳು**

   2024–25ರ ಲೆಕ್ಕ ಪರಿಶೋಧನಾ ವರದಿಯ ಆಸ್ತಿ–ಜವಾಬ್ದಾರಿ ತಃಖ್ತೆ ರೀತ್ಯಾ ದಿನಾಂಕ 31.03.2025ರ ಅಂತ್ಯಕ್ಕೆ ಅಪದ್ಧನ ನಿಧಿ ಮೊತ್ತವು ರೂ.36,89,038/– ಇರುತ್ತದೆ. ಸಹಕಾರ ಸಂಘಗಳ ಕಾಯಿದೆ ಹಾಗೂ ಸಂಘದ (ಬೈಲಾ) ಉಪನಿಯಮದ ಅನ್ವಯ ಸಂಘದ ವ್ಯವಹಾರದಿಂದ ಪ್ರತ್ಯೇಕ ಷೆಡ್ಯೂಲ್ ಬ್ಯಾಂಕಿನಲ್ಲಿ ಠೇವಣಿ ಇಡಬೇಕಾಗಿರುತ್ತದೆ. ಅದರಂತೆ ಸಧ್ಯಕ್ಕೆ ಸಂಘವು ರೂ. 7,07,476/–ಗಳನ್ನು ಠೇವಣಿಯಾಗಿ MCDCC Bank ನಲ್ಲಿ ತೊಡಗಿಸಲಾಗಿದೆ. ಉಳಿದ ಹಣವನ್ನು ಸಂಘದ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ವರ್ಷಗಳಲ್ಲಿ ತೊಡಗಿಸ ಲಾಗುವುದು.

5. **ವಿವಿಧ ಬಡಾವಣೆಗಳ ಅಭಿವೃದ್ಧಿಗೆ ಜಮೀನು ಖರೀದಿಸಿರುವುದು ಹಾಗೂ ಅಭಿವೃದ್ಧಿ ನಂತರ ನಿವೇಶನಗಳ ಹಂಚಿಕೆಯ ವಿವರ ಈ ಕೆಳಕಂಡಂತಿದೆ.**

a. ಜೆಎಸ್ಎಸ್ ಮೊದಲ ಹಂತದ ಬಡಾವಣೆ : ಕ್ಯಾತಮಾರನಹಳ್ಳಿ ಮತ್ತು ಸಾತಗಳ್ಳಿ

(ಅವಧಿ 1975–1990)

ಡೆವಲಪರ್ಸ್ : M/s S.R. Construction Engineers Consultant & Contractors,
234-A, VI Cross, Gandhi Nagar, Bengaluru
Represented by : Sri S. Ramachandra

ಅಭಿವೃದ್ಧಿಪಡಿಸಲಾದ ಜಮೀನಿನ ವಿವರ

ಕ್ಯಾತಮಾರನಹಳ್ಳಿ	28 ಎಕರೆ 24 ಗುಂಟೆ
ಸಾತಗಳ್ಳಿ	22 ಎಕರೆ 21 ಗುಂಟೆ
ಒಟ್ಟು	51 ಎಕರೆ 05 ಗುಂಟೆ

ಅಭಿವೃದ್ಧಿಗೊಂಡಿರುವ ನಿವೇಶನಗಳ ವಿವರ

ಮೊದಲ ಹಂತದ ಬಡಾವಣೆಯಲ್ಲಿ ಒಟ್ಟು 665 ನಿವೇಶನಗಳು ಅಭಿವೃದ್ಧಿಯಾಗಿದ್ದು 663 ನಿವೇಶನಗಳು ಹಂಚಿಕೆಯಾಗಿರುತ್ತವೆ. ಎರಡು ನಿವೇಶನಗಳು ಸಂಘದ ವಶದಲ್ಲಿ ಇರುತ್ತವೆ. ವಿವರ ಕೆಳಕಂಡಂತಿವೆ.

ನಿವೇಶನದ ಅಳತೆ	ಮಧ್ಯಂತರ	ಮೂಲೆ ನಿವೇಶನ	ಒಟ್ಟು ನಿವೇಶನ ಸಂಖ್ಯೆ
20 * 30	57	4	61
30 * 40	148	21	169
30 * 45	75	6	81
35 * 50	40	4	44
40 * 60	143	33	176
50 * 70	27	6	33
50 * 80	27	9	36
Odd site	65	–	65
ಒಟ್ಟು	**582**	**83**	**665**

ಸರ್ವೆ ನಂ. 170ರ ಜಮೀನಿನಲ್ಲಿ ಅಭಿವೃದ್ಧಿಗೊಂಡಿರುವ ನಿವೇಶನಗಳು ಹಂಚಿಕೆಯಾಗಿದ್ದರೂ ನ್ಯಾಯಾಲಯದಲ್ಲಿ ಹೂಡಿರುವ ವ್ಯಾಜ್ಯದಿಂದಾಗಿ ಬ್ಲಾಕ್ ನಂ 21ರ ನಿವೇಶನ ಸಂಖ್ಯೆ 1 ಮತ್ತು 7 ರಲ್ಲಿ ಮಾತ್ರ ಮನೆಗಳ ನಿರ್ಮಾಣವಾಗಿದೆ. ರಾಜ್ಯ ಉಚ್ಚನ್ಯಾಯಾಲಯದಲ್ಲಿ ನಡೆಯುತ್ತಿರುವ ಈ ವ್ಯಾಜ್ಯವನ್ನು ಸಂಘದ ಪರವಾಗಿ ಶ್ರೀ ನವೀನ್ ಗುಡಿಕೋಟೆ, ಅಡ್ವೋಕೇಟ್, ಬೆಂಗಳೂರು ಇವರು ನಿರ್ವಹಿಸುತ್ತಿದ್ದಾರೆ.

b. ಜೆಎಸ್‌ಎಸ್ ಎರಡನೇ ಹಂತದ ಬಡಾವಣೆ

ಲಲಿತಾದ್ರಿಪುರ / ಯಾಂದಹಳ್ಳಿ ಮತ್ತು ಕುಪ್ಪಲೂರು / ಮಂಡಕಳ್ಳಿ

ಡೆವಲಪರ್ಸ್ : M/s S.S. Developers, Mysuru
Represented by R.G. Chinnaswamy

ಈ ಬಡಾವಣೆ ಅಭಿವೃದ್ಧಿಗೆ M/s. S.S. Developers ರವರೊಂದಿಗೆ ದಿನಾಂಕ 29.09.1995 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಕುಪ್ಪಲೂರು ಮತ್ತು ಮಂಡಕಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ 18 ಎಕರೆ 35 ಗುಂಟೆ ಜಮೀನು ಹಾಗೂ ಲಲಿತಾದ್ರಿಪುರ ಮತ್ತು ಯಾಂದಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ 92 ಎಕರೆ 07 ಗುಂಟೆ ಜಮೀನು ಅಂದರೆ ಒಟ್ಟು 111 ಎಕರೆ 2 ಗುಂಟೆ ಜಮೀನು ಖರೀದಿಸಿ ಬಡಾವಣೆ ಅಭಿವೃದ್ಧಿಪಡಿಸಲಾಗಿದೆ. ಎರಡನೇ ಹಂತದ ಬಡಾವಣೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾದ್ದರಿಂದ M/S S.S Developers ರವರೊಂದಿಗಿನ ಒಪ್ಪಂದ ಅಂತ್ಯಗೊಳಿಸಿ M/s ESS & ESS Echo Valley Inc, Represented by Sri Srikanth Das ಇವರೊಂದಿಗೆ ದಿನಾಂಕ 09.05.2011 ರಂದು ಕರಾರು ಏರ್ಪಡಿಸಿಕೊಳ್ಳಲಾಗಿದೆ.

ಜಮೀನಿನ ವಿವರ :

(i)	ಲಲಿತಾದ್ರಿಪುರ	62 ಎಕರೆ 39 ½ ಗುಂಟೆ
(ii)	ಯಾಂದಹಳ್ಳಿ	29 ಎಕರೆ 7 ½ ಗುಂಟೆ
(iii)	ಕುಪ್ಪಲೂರು	12 ಎಕರೆ 35 ಗುಂಟೆ
(iv)	ಮಂಡಕಳ್ಳಿ	6 ಎಕರೆ
	ಒಟ್ಟು	**111 ಎಕರೆ 02 ಗುಂಟೆ**

ಎರಡನೇ ಹಂತದ ಬಡಾವಣೆಗೆ 1995–96ರಲ್ಲಿ ಸದಸ್ಯರುಗಳಿಂದ ಅರ್ಜಿಗಳನ್ನು ಸ್ವೀಕರಿಸಿದ್ದು 1248 ಜನ ಆಕಾಂಕ್ಷಿಗಳು ನಿವೇಶನಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿದಾರರುಗಳಲ್ಲಿ 1022 ಸದಸ್ಯರು, 226 ಸಹ–ಸದಸ್ಯರಾಗಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ 2 ಸದಸ್ಯರು ಹಾಗೂ 1 ಸಹಸದಸ್ಯರು ನಿವೇಶನ ಠೇವಣಿಗಳನ್ನು ಹಿಂಪಡೆದಿರುತ್ತಾರೆ.

ನಿವೇಶನದ ಅಳತೆ	**ಮಧ್ಯಂತರ**	**ಮೂಲೆ ನಿವೇಶನ**	**ಒಟ್ಟು ನಿವೇಶನ ಸಂಖ್ಯೆ**
20 * 30	154	15	169
30 * 40	396	61	457
35 * 50	53	9	62
40 * 60	313	64	377
50 * 80	104	18	122
ಒಟ್ಟು	**1020**	**167**	**1187**

* ಈ ಮೇಲಿನ ಒಟ್ಟು ನಿವೇಶನಗಳ ಸಂಖ್ಯೆಯಲ್ಲಿ ಮೈ.ನ.ಅ.ಪ್ರಾಧಿಕಾರದಿಂದ ಶೇ 5ರಷ್ಟು ಸಿ.ಡಿ ಪಟ್ಟಿ ಬಿಡುಗಡೆಯಾಗದಿರುವ ನಿವೇಶನಗಳು ಸಹ ಸೇರಿಕೊಂಡಿರುತ್ತದೆ.
* ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನ್ಯಕ್ರಾಂತಗೊಳಿಸಿ ವಿವಿಧ ಅಳತೆಯ 1187 ನಿವೇಶನಗಳು ಈ ಬಡಾವಣೆಯಲ್ಲಿ ಅಭಿವೃದ್ಧಿಗೊಂಡಿವೆ. ಇದುವರೆವಿಗೆ ಒಟ್ಟು 900 ನಿವೇಶನಗಳನ್ನು ಸದಸ್ಯರು/ಸಹಸದಸ್ಯರುಗಳಿಗೂ ನೋಂದಣಿ ಮಾಡಿಕೊಡಲಾಗಿದೆ. 141 ಮೂಲೆ ನಿವೇಶನಗಳನ್ನು ಹರಾಜು ಪ್ರಕ್ರಿಯೆಯಲ್ಲಿ ವಿಲೇವಾರಿ ನೋಂದಣಿ ಮಾಡಿಕೊಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 20 ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಗಿರುತ್ತದೆ.
* ಲಲಿತಾದ್ರಿಪುರ/ಯಾಂದಹಳ್ಳಿ ಬಡಾವಣೆಯಲ್ಲಿ ಮೈ.ನ.ಅ.ಪ್ರಾಧಿಕಾರದಿಂದ ದಿಂದ ಬಿಡುಗಡೆಗೆ ಬಾಕಿ ಇರುವ ಶೇ 5 ರಷ್ಟು ನಿವೇಶನಗಳ ಬಿಡುಗಡೆಗೆ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಸರ್ಕಾರದ ಇತ್ತೀಚಿನ ಆದೇಶದ ರೀತ್ಯಾ MUDA ದಿಂದ ಯಾವುದೇ ಅನುಮೋದನೆ ಪಡೆಯುವುದು ಸಾಧ್ಯವಾಗಿರುವುದಿಲ್ಲ.

ಕುಪ್ಪಲೂರು / ಮಂಡಕಳ್ಳಿ

ನಿವೇಶನದ ಅಳತೆ	ಮಧ್ಯಂತರ	ಮೂಲೆ ನಿವೇಶನ	ಒಟ್ಟು ನಿವೇಶನ ಸಂಖ್ಯೆ
20 * 30	28	03	31
30 * 40	121	22	143
30 * 60	20	05	25
40 * 60	59	13	72
50 * 80	08	01	09
ಒಟ್ಟು	**236**	**44**	**280**

ಎರಡನೇ ಹಂತದ ಭಾಗವಾದ ಕುಪ್ಪಲೂರು/ಮಂಡಕಳ್ಳಿ ಬಡಾವಣೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅನುಮೋದಿಸಿರುವ ನಕಾಶೆ ರೀತ್ಯಾ ಬಡಾವಣೆಯಲ್ಲಿ ಮೂಲೆ ನಿವೇಶನಗಳು ಸೇರಿ 280 ನಿವೇಶನಗಳು ಅಭಿವೃದ್ಧಿಗೊಂಡಿವೆ. ಪ್ರಾಧಿಕಾರವು ಮೊದಲ ಹಂತದಲ್ಲಿ ಶೇ. 40 ರಷ್ಟು ನಿವೇಶನಗಳನ್ನು ಅಂದರೆ ವಿವಿಧ ಅಳತೆಯ 112 ನಿವೇಶನಗಳನ್ನು ಬಿಡುಗಡೆ ಮಾಡಿರುತ್ತದೆ. ದಿನಾಂಕ 16.6.2022 ರಂದು ಪರಮಪೂಜ್ಯ ಜಗದ್ಗುರುಗಳವರ ಕೃಪಾಶೀರ್ವಾದ ಹಾಗೂ ಅಮೃತ ಹಸ್ತದಿಂದ 102 ನಿವೇಶನಗಳನ್ನು ಲಾಟರಿ ಮೂಲಕ ARCS ಅನುಮೋದಿತ ಜೇಷ್ಠತಾ ಪಟ್ಟಿ ರೀತ್ಯಾ ನಿವೇಶನಾಕಾಂಕ್ಷಿಗಳಿಗೆ ಹಂಚಿಕೆ ಮಾಡಲಾಗಿದೆ.

ಎರಡನೇ ಹಂತದಲ್ಲಿ ವಿವಿಧ ಅಳತೆಯ ಒಟ್ಟು 124 ಮಧ್ಯಂತರ ನಿವೇಶನಗಳು ದಿನಾಂಕ 27.10.2023ರಂದು ಹಾಗೂ ದಿನಾಂಕ: 06.06.2024ರಂದು 44 ಮೂಲೆ ನಿವೇಶನಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾಗಿದ್ದ ಮಧ್ಯಂತರ ನಿವೇಶನಗಳ ಪೈಕಿ ಪ್ರಸಕ್ತ ಸಾಲಿನಲ್ಲಿ 99 ನಿವೇಶನಗಳನ್ನು ಹಂಚಿಕೆಮಾಡಲಾಗಿರುತ್ತದೆ. ದಿನಾಂಕ:20.10.2024 ರಂದು 09 ಮೂಲೆ ನಿವೇಶನಗಳನ್ನು ಹರಾಜು ಪ್ರಕ್ರಿಯೆ ಮೂಲಕ ನೀಡಲಾಗಿದೆ.

ಕುಪ್ಪಲೂರು – ಮಂಡಕಳ್ಳಿ ಬಡಾವಣೆಯಲ್ಲಿ ಸಂಘವು ನಿರ್ಮಿಸಿರುವ ಬಡಾವಣೆಗೆ ಹೊಂದಿಕೊಂಡಂತೆ M/s Bio Diversity Conservation (India) Ltd., ಇವರು ಬಡಾವಣೆ ನಿರ್ಮಿಸಿ, ಸಂಘದ ಬಡಾವಣೆ ರಸ್ತೆಗೆ ತಡೆಗೋಡೆ ನಿರ್ಮಿಸಿರುತ್ತಾರೆ. ಇದರ ತೆರವಿಗೆ ಪ್ರಯತ್ನಿಸಲಾಗಿತ್ತು. ಆದರೆ ಸದರಿಯವರು ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿರುವುದರಿಂದ ಸಾಧ್ಯವಾಗಿರುವುದಿಲ್ಲ.

ಮಂಡಕಳ್ಳಿ ಗ್ರಾಮದ ಸರ್ವೆ 306/1ರಲ್ಲಿ ಸಂಘಕ್ಕೆ ಸೇರಿದ 30 ಗುಂಟೆ ಜಮೀನನ್ನು ಸರ್ವೆ ನಂ. 306/2ರ ಹಿಡುವಳಿದಾರರು ಒತ್ತುವರಿ ಮಾಡಿಕೊಂಡಿದ್ದು ಇದರ ತೆರವಿಗೂ ಸಂಘವು ಕ್ರಮವಹಿಸಿರುತ್ತದೆ. ಮಂಡಕಳ್ಳಿ ಗ್ರಾಮದ ಸರ್ವೆ 306ರ ಪಶ್ಚಿಮ ಭಾಗದಲ್ಲಿ ಖಾಸಗಿ ಬಡಾವಣೆಯವರು ನಮ್ಮ ಬಡಾವಣೆಯ 4 ನಿವೇಶನಗಳನ್ನು ಒತ್ತುವರಿ ಮಾಡಿ ರಸ್ತೆ ನಿರ್ಮಿಸಲು ಪ್ರಯತ್ನಿಸುತ್ತಿದ್ದು ಸಂಘವು ಒತ್ತುವರಿ ತೆರವುಗೊಳಿಸಲು ಕ್ರಮವಹಿಸಿದೆ.

c. ಮೂರನೇ ಹಂತ : ವರುಣಾ ಗ್ರಾಮ

ಡೆವಲಪರ್ಸ್ : M/s Chamundeshwari Constructions, Mysuru
Represented by : Sri Kemparaje Urs

M/s Chamundeshwari Constructions ರವರೊಂದಿಗೆ ದಿನಾಂಕ: 23.11.2005 ರಂದು ಸಂಘವು ಕರಾರು ಒಪ್ಪಂದ ಏರ್ಪಡಿಸಿಕೊಳ್ಳಲಾಗಿತ್ತು. ಇವರು 40 ಎಕರೆ 4 ¾ ಗುಂಟೆ ಜಮೀನನ್ನು ಸಂಘದ ಪರವಾಗಿ ಖರೀದಿಸಿರುತ್ತಾರೆ. ಇದರಲ್ಲಿ 20 ಎಕರೆ 31 ಗುಂಟೆ ಅನ್ಯಕ್ರಾಂತವಾಗಿದ್ದು ನಕ್ಷೆಯು ನಗರ ಮತ್ತು ಗ್ರಾಮಾಂತರ ನಿರ್ದೇಶನಾಲಯ, ಬೆಂಗಳೂರು ಇವರಿಂದ ಅನುಮೋದಿಸಲ್ಪಟ್ಟಿರುತ್ತದೆ. ವಿವಿಧ ಕಾರಣಗಳಿಂದಾಗಿ M/s Chamundeshwari Constructions ರವರೊಂದಿಗಿನ ಒಪ್ಪಂದವನ್ನು ದಿನಾಂಕ 11.5.2013ರಂದು ಅಂತ್ಯಗೊಳಿಸಲಾಯಿತು.

ತದನಂತರ M/s ಶಾಂಭವಿ ಡೆವಲಪರ್ಸ್‌ರೊಂದಿಗೆ ದಿನಾಂಕ 24/2/2016ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಕರಾರಿನನ್ವಯ ವರುಣಾ ಗ್ರಾಮದಲ್ಲಿ ಸಂಘವು ಖರೀದಿಸಿದ್ದ 40 ಎಕರೆ 4¾ ಗುಂಟೆ ಜಮೀನಲ್ಲದೆ ಹೆಚ್ಚುವರಿಯಾಗಿ 20 ಎಕರೆ ಜಮೀನನ್ನು ಸದರಿಯವರು ಸಂಘದ ಪರವಾಗಿ

ಖರೀದಿಸಿ ಒಟ್ಟು 60 ಎಕರೆ ವಿಸ್ತೀರ್ಣದಲ್ಲಿ ಬಡಾವಣೆ ಅಭಿವೃದ್ಧಿಪಡಿಸಬೇಕಾಗಿತ್ತು. ಆದರೆ ಹೆಚ್ಚುವರಿ ಜಮೀನು ಖರೀದಿಗೆ ಡೆವಲಪರ್ಸ್‌ರವರು ಸಂಘದಿಂದ ಹಣ ಪಡೆದರಾದರೂ ಯಾವುದೇ ಜಮೀನು ಖರೀದಿಸಿರುವುದಿಲ್ಲ. ಇದಲ್ಲದೆ ಪ್ರಥಮ ಹಂತದಲ್ಲಿ 20 ಏಕರೆ 31 ಗುಂಟೆ ಜಮೀನಿನಲ್ಲಿ ಬಡಾವಣೆ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಿದರಾದರೂ ಅರ್ಧಕ್ಕೆ ಸ್ಥಗಿತಗೊಳಿಸಿದ್ದರು. M/s ಶಾಂಭವಿ ಡೆವಲಪರ್ಸ್ ರವರಿಗೆ ಸಂಘವು ದಿನಾಂಕ 24.2.2016ರಿಂದ ದಿನಾಂಕ 20.01.2020ರ ಅವಧಿಯವರೆಗೆ ಒಟ್ಟು 14,84,39,770/– ರೂಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಿರುತ್ತದೆ.

M/s ಶಾಂಭವಿ ಡೆವಲಪರ್ಸ್‌ರವರು ಬಡಾವಣೆ ಅಭಿವೃದ್ಧಿ ಕಾಮಗಾರಿ ಸ್ಥಗಿತಗೊಳಿಸಿದುದರಿಂದ ಇವರ ವಿರುದ್ಧ ದಿನಾಂಕ 16.8.2022ರಂದು ಮೈಸೂರು ನಗರದ IInd Addl., District & Sessions Judge, Mysuru ಇಲ್ಲಿ Commercial Suit ದಾಖಲಿಸಲಾಗಿತ್ತು. ಈ ಮೊಕದ್ದಮೆ ಇತ್ಯರ್ಥಗೊಂಡು ದಿನಾಂಕ 20.3.2024 ರಂದು ತೀರ್ಪು ಸಂಘದ ಪರವಾಗಿ ಬಂದಿರುತ್ತದೆ.

ನ್ಯಾಯಾಲಯದ ಆದೇಶದ ಪ್ರಕಾರ M/s ಶಾಂಭವಿ ಡೆವಲಪರ್ಸ್‌ರವರು ಹೆಚ್ಚುವರಿ ಪಡೆದಿರುವ ಹಣ, damages ಮತ್ತು ಬಡ್ಡಿ ಸಹಿತ ಒಟ್ಟು 9.04 ಕೋಟಿ ರೂ.ಗಳನ್ನು ಸಂಘಕ್ಕೆ ಹಿಂದಿರುಗಿಸಬೇಕಾಗಿದೆ. ಈ ಹಣವು 90 ದಿನಗಳೊಳಗೆ ಸಂಘಕ್ಕೆ ಪಾವತಿಯಾಗಬೇಕಿತ್ತು. ಆದರೆ ಈ ಅವಧಿಯೊಳಗೆ ಹಣ ಜಮೆ ಆಗಿರುವುದಿಲ್ಲವಾದ್ದರಿಂದ ನ್ಯಾಯಾಲಯದಲ್ಲಿ Execution Petition No:Com.Ex/296/2024 ದಾಖಲಿಸಿದೆ.

ಸ್ಥಗಿತಗೊಂಡಿದ್ದ ಮೂರನೇ ಹಂತದ ಅಭಿವೃದ್ಧಿ ಕೆಲಸಗಳನ್ನು ಪೂರ್ಣಗೊಳಿಸಲು M/s ಚಾಮುಂಡೇಶ್ವರಿ ಕನ್‌ಸ್ಟ್ರಕ್ಷನ್ಸ್, ಮೈಸೂರು ಇವರೊಂದಿಗೆ ದಿನಾಂಕ 20.10.2023 ರಂದು MoU ಏರ್ಪಡಿಸಿಕೊಳ್ಳಲಾಯಿತು. ಎರಡು ಹಂತಗಳಲ್ಲಿ ಬಡಾವಣೆ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಈ ಪ್ರಕಾರ ಮೊದಲ ಹಂತದಲ್ಲಿ ಪ್ರಾರಂಭಗೊಂಡ 20 ಎಕರೆ 31 ಗುಂಟೆ ಜಮೀನಿನ ಅಭಿವೃದ್ಧಿ ಕಾರ್ಯವು ಬಹುತೇಕ ಪೂರ್ಣಗೊಂಡಿದೆ. ವರುಣ ಗ್ರಾಮ ಪಂಚಾಯ್ತಿಯಿಂದ ಶೇ. 60 ರಷ್ಟು ನಿವೇಶನಗಳು ಬಿಡುಗಡೆಯಾಗಿದ್ದು 171 ನಿವೇಶನಗಳ ಖಾತೆಗಳು ಸಹ ಲಭ್ಯವಾಗಿವೆ.

ಎರಡನೇ ಹಂತದಲ್ಲಿ ಅಭಿವೃದ್ಧಿಗೊಳ್ಳಲಿರುವ 19 ಎಕರೆ 13 ¾ ಗುಂಟೆ ಜಮೀನಿನಲ್ಲಿ 10 ಎಕರೆ 14½ ಗುಂಟೆ ಜಮೀನು ಈಗಾಗಲೇ ಭೂಪರಿವರ್ತನೆ ಆಗಿರುತ್ತದೆ. ಉಳಿದ ಜಮೀನಿನ ಭೂಪರಿವರ್ತನೆಗೆ ಡೆವಲಪರ್ಸ್‌ರವರು ಕ್ರಮವಹಿಸಿದ್ದಾರೆ. ಭೂ–ಪರಿವರ್ತನೆ ಆದೇಶ ಲಭ್ಯವಾಗುತ್ತಿದ್ದಂತೆ ಈ ಜಮೀನಿನಲ್ಲಿ ಅಭಿವೃದ್ಧಿಗೊಳಿಸಬೇಕಾದ ನಿವೇಶನಗಳ ನಕಾಶೆಗೆ ಗ್ರಾಮಾಂತರ ಮತ್ತು ನಗರ ಯೋಜನಾ ಇಲಾಖೆಯಿಂದ ಅನುಮತಿ ಪಡೆಯಲಾಗುವುದು.

ಮೂರನೇ ಹಂತದ ಬಡಾವಣೆ ಅಭಿವೃದ್ಧಿಗೆ ಖರೀದಿಸಲಾಗಿರುವ ಜಮೀನಿನ ವಿವರ

1	ಸಂಘದ ಹೆಸರಿನಲ್ಲಿ ಜಮೀನು ಖರೀದಿಸಿರುವುದು	40 ಎಕರೆ 4 ¾ ಗುಂಟೆ
2	ಭೂ ಪರಿವರ್ತನೆಯಾಗಿರುವ ಜಮೀನು	20 ಎಕರೆ 31 ಗುಂಟೆ + 16 ಎಕರೆ 18 ¾ ಗುಂಟೆ
3	ಭೂ ಪರಿವರ್ತನೆಯಾಗಿಲ್ಲದ ಜಮೀನು	2 ಎಕರೆ 35 ಗುಂಟೆ
	ಒಟ್ಟು	**40 ಎಕರೆ 4 ¾ ಗುಂಟೆ**

ಮೂರನೇ ಹಂತ ವರುಣ ಬಡಾವಣೆಯ ಫೇಸ್–1 (20 ಎಕರೆ 31 ಗುಂಟೆ)ನಲ್ಲಿ ನಿರ್ಮಿಸಿರುವ ನಿವೇಶನಗಳ ವಿವರ:

ನಿವೇಶನಗಳ ಅಳತೆ	**ಮಧ್ಯಂತರ ನಿವೇಶನಗಳು**	**ಮೂಲೆ ನಿವೇಶನಗಳು**	**ಒಟ್ಟು ನಿವೇಶನಗಳು**
20 * 30	28	1	29
30 * 40	109	13	122
35 * 50	4	10	14
40 * 60	30	6	36
50 * 80	38	8	46
	209	**38**	**247**

ವರುಣ ಗ್ರಾಮಪಂಚಾಯ್ತಿಯಿಂದ ಮೊದಲನೇ ಹಂತದಲ್ಲಿ ಶೇ. 60 ರಷ್ಟು ಬಿಡುಗಡೆಯಾಗಿದ್ದ ಅಂದರೆ 171 ನಿವೇಶನಗಳಲ್ಲಿ ದಿನಾಂಕ: 21.10.2024ರಂದು 167 ನಿವೇಶನಗಳನ್ನು ಲಾಟರಿ ಮೂಲಕ ಸಹಕಾರ ಸಂಘಗಳ ನಿಬಂಧಕರ ಅನುಮೋದಿತ ಜೇಷ್ಠತಾ ಪಟ್ಟಿ ರೀತ್ಯ ಅರ್ಹ ನಿವೇಶನಾಕಾಂಕ್ಷಿಗಳಿಗೆ ಹಂಚಿಕೆ ಮಾಡಲಾಗಿದೆ ಮತ್ತು ದಿನಾಂಕ: 31.03.2025 ರವರೆಗೆ 30 ವಿವಿಧ ಅಳತೆಯ ನಿವೇಶನಗಳನ್ನು ಸಂಘದಿಂದ ಸದಸ್ಯರುಗಳಿಗೆ ನೋಂದಾವಣಿ ಮಾಡಿಕೊಡಲಾಗಿದೆ.

ಪ್ರಸ್ತುತ ಸಂಘವು ಹೊಂದಿರುವ ಜಮೀನಿನಲ್ಲಿ ಈ ಬಡಾವಣೆಯ ನಿವೇಶನಾಕಾಂಕ್ಷಿಗಳೆಲ್ಲರಿಗೂ ಅವರುಗಳು ಕೋರಿರುವ ಅಳತೆ ನಿವೇಶನಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪ್ರಸ್ತುತ ಲಭ್ಯವಿರುವ ಜಮೀನಿನಲ್ಲಿಯೇ ಎಲ್ಲಾ ಸದಸ್ಯರುಗಳಿಗೆ ನಿವೇಶನ ಒದಗಿಸುವ ಉದ್ದೇಶದಿಂದ 40*60 ಹಾಗೂ 50*80ರ ಅಳತೆ ನಿವೇಶನಗಳ ಬದಲಿಯಾಗಿ 30*40ರ ಅಳತೆ ನಿವೇಶನ

ಅಭಿವೃದ್ಧಿಪಡಿಸಿ ಹಂಚಿಕೆ ಮಾಡುವ ಯೋಜನೆಯನ್ನು ಸಂಘದ ಆಡಳಿತ ಮಂಡಳಿ ಹೊಂದಿತ್ತು. ದಿನಾಂಕ 10.8.2024ರಂದು 3ನೇ ಹಂತದ ನಿವೇಶನಾಕಾಂಕ್ಷಿಗಳ ಸಭೆ ಆಯೋಜಿಸಿ ಸದಸ್ಯರುಗಳ ಅಭಿಪ್ರಾಯ ಸಂಗ್ರಹಿಸಲಾಯಿತು. ಆದರೆ ನಿವೇಶನಾಕಾಂಕ್ಷಿಗಳು ನಾವು ನಿವೇಶನ ಠೇವಣಿ ಪಾವತಿಸಿರುವ ವಿಸ್ತೀರ್ಣದ ನಿವೇಶನವನ್ನೇ ಮಂಜೂರು ಮಾಡಬೇಕೆಂದು ತಿಳಿಸಿದ್ದುದರಿಂದ ಈ ಪ್ರಸ್ತಾವನೆಯನ್ನು ಕೈಬಿಡಲಾಗಿದೆ. ಬದಲಾಗಿ ಹೆಚ್ಚುವರಿ ಜಮೀನು ಖರೀದಿಗೆ ಸಂಘವು ಪ್ರಯತ್ನಿಸುತ್ತಿದೆ.

ಹೆಚ್ಚುವರಿ ಜಮೀನು ಖರೀದಿ ಕುರಿತು

ಮೂರನೇ ಹಂತದ ಬಡಾವಣೆಗೆ 529 ನಿವೇಶನಾಕಾಂಕ್ಷಿಗಳಿದ್ದು, ಸಂಘದಲ್ಲಿ ಲಭ್ಯವಿರುವ 40 ಎಕರೆ 4 ¾ ಗುಂಟೆ ಜಮೀನಿನಲ್ಲಿ ಮೂಲೆ ನಿವೇಶನಗಳನ್ನು ಹೊರತು ಪಡಿಸಿ ಸುಮಾರು 437 ನಿವೇಶನಗಳು ಮಾತ್ರ ಲಭ್ಯವಿದೆ. ಇನ್ನು 92 ನಿವೇಶನಾಕಂಕ್ಷಿಗಳಿಗೆ ನಿವೇಶನಗಳ ಕೊರತೆಯಿರುತ್ತದೆ.

ಸಂಘಕ್ಕೆ ದಿನಾಂಕ: 13.10.2005ರೊಳಗೆ ನಿವೇಶನ ಠೇವಣಿ ಪಾವತಿಸಿರುವ ಎಲ್ಲಾ ಸದಸ್ಯರಿಗೂ ನಿವೇಶನ ನೀಡಬೇಕಾಗಿದ್ದು ಸಂಘಕ್ಕೆ 164 ನಿವೇಶನಗಳ ಅವಶ್ಯಕತೆಯಿರುತ್ತದೆ. ದಿನಾಂಕ:13.10.2005ರ ನಂತರ ಎರಡನೇ ಹಂತದ ಬಡಾವಣೆಗೆ 116 ಸದಸ್ಯರು ನಿವೇಶನ ಠೇವಣಿ ಪಾವತಿಸಿದ್ದು ಇದರಲ್ಲಿ 32 ಸದಸ್ಯರಿಗೆ ಈಗಾಗಲೇ ನಿವೇಶನ ಹಂಚಲಾಗಿದೆ. ಉಳಿದ 83 ಸದಸ್ಯರಿಗೆ ನಿವೇಶನ ಹಂಚಲು ನಿವೇಶನಗಳ ಕೊರತೆಯಿರುತ್ತದೆ.

ಸಂಘಕ್ಕೆ ನಿವೇಶನ ಠೇವಣಿ ಪಾವತಿಸಿರುವ ಸದಸ್ಯರು ಮತ್ತು ಸಹಸದಸ್ಯರೆಲ್ಲರಿಗೂ ನಿವೇಶನ ನೀಡಲು ಸಂಘಕ್ಕೆ ಒಟ್ಟು ವಿವಿಧ ಅಳತೆಯ 339 (92+83+164) ನಿವೇಶನಗಳ ಅವಶ್ಯಕತೆಯಿದ್ದು ಇದಕ್ಕೆ ಹೆಚ್ಚುವರಿ ಜಮೀನು ಖರೀದಿ ಮಾಡುವುದು ಅಗತ್ಯತೆಯೂ ಮತ್ತು ಅನಿವಾರ್ಯವೂ ಇರುತ್ತದೆ. ಆದ್ದರಿಂದ ಸಂಘದ ಪ್ರಸಕ್ತ ಆಡಳಿತ ಮಂಡಳಿಯ ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಹೆಚ್ಚುವರಿ ಜಮೀನು ಖರೀದಿ ಒಂದೇ ಸರಿಯಾದ ಮಾರ್ಗವೆಂದು ಅಭಿಪ್ರಾಯಪಟ್ಟಿರುತ್ತದೆ.

d. ನಾಲ್ಕನೇ ಹಂತ : ಮಾದಾಪುರ, ಜಂತಗಳ್ಳಿ ಮತ್ತು ಅರೆಗೌಡನಹಳ್ಳಿ ಗ್ರಾಮಗಳು

ಡೆವಲಪರ್ಸ್: M/s ESS & ESS Echo Valley Inc., Mysuru
Represented by : Sri Sreekanth Das

ನಾಲ್ಕನೇ ಹಂತದ ಬಡಾವಣೆಗೆ M/s ESS & ESS Echo Valley Inc.,ರೊಂದಿಗೆ ದಿನಾಂಕ 9.6.2011ರಲ್ಲಿ ಕರಾರು ಒಪ್ಪಂದ ಏರ್ಪಡಿಸಿಕೊಳ್ಳಲಾಗಿರುತ್ತದೆ. ಇವರು ಒಟ್ಟು 300 ಎಕರೆ ಜಮೀನನ್ನು ಖರೀದಿಸಿ ಅಭಿವೃದ್ಧಿ ಪಡಿಸುವುದಾಗಿ ಕರಾರು ಮಾಡಿಕೊಂಡಿರುತ್ತಾರೆ. ಈ ಹಂತಕ್ಕೆ ಒಟ್ಟು 2,403 ಷೇರುದಾರರ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಇದರಲ್ಲಿ 659 ಸದಸ್ಯರು ಹಾಗೂ 1744 ಸಹ ಸದಸ್ಯರುಗಳು ನಿವೇಶನ ಕೋರಿ ನಿವೇಶನ ಠೇವಣಿ ಪಾವತಿಸಿದ್ದಾರೆ.

M/s ESS & ESS Echo Valley Inc., ರವರೊಂದಿಗೆ ಏರ್ಪಡಿಸಿಕೊಂಡಿರುವ ಕರಾರಿನ ರೀತ್ಯಾ ಒಂದು ಚದರ ಅಡಿಗೆ ರೂ. 423/– ರಂತೆ 61,20,000 ಚದರಡಿಗಳನ್ನು ರೂ. 258,81,60,000/– ರೂ.ಗಳಿಗೆ ಅಭಿವೃದ್ಧಿ ಪಡಿಸಿ ನಿವೇಶನಗಳನ್ನು ಹಂಚಲು ಒಪ್ಪಂದವಾಗಿರುತ್ತದೆ. ಈ ಒಪ್ಪಂದದ ರೀತ್ಯಾ ಸಂಘಕ್ಕೆ ಮೂಲೆ ನಿವೇಶನಗಳ ಹಕ್ಕು ಇರುವುದಿಲ್ಲ. ಈ ಬಡಾವಣೆ ಅಭಿವೃದ್ಧಿಗೆ ಸಂಘವು 1,06,74,20,000/– ರೂ.ಗಳನ್ನು 2011 ರಿಂದ 2015ರ ಅವದಿಯಲ್ಲಿ ಬಿಡುಗಡೆ ಮಾಡಿರುತ್ತದೆ.

ಕರಾರಿನ ರೀತ್ಯಾ 3000 ನಿವೇಶನಗಳು:

20 * 30	200
30 * 40	1600
40 * 60	800
50 * 80	300
80 * 120	100
ಒಟ್ಟು	**3000**

07. 2025–26ನೇ ಸಾಲಿನ ಆಂಶಿಕ ವರದಿ

ಜೆಎಸ್ಎಸ್ ಬಡಾವಣೆ ಮೊದಲನೇ ಹಂತ

* 170 ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದರೂ ಸಹ ಸರ್ವೆ ನಂಬರ್ 170ರ ಹಿಂದಿನ ಭೂಮಾಲೀಕರು ಏಕ ನಿವೇಶನ ನಕ್ಷೆ ಪಡೆದು ಇತರರಿಗೆ ಪರಭಾರೆ ಮಾಡಿರುತ್ತಾರೆ. ನ್ಯಾಯಾಲಯದಲ್ಲಿ ಸದರಿ ಪ್ರಕರಣವು ಇನ್ನೂ ಇತ್ಯರ್ಥಗೊಂಡಿರುವುದಿಲ್ಲ ವಾದರೂ ಹಿಂದಿನ ಭೂಮಾಲೀಕರು ಸರ್ವೆ ನಂಬರ್ 170ರ ಜಮೀನನ್ನು ಇತರರಿಗೆ ಪರಭಾರೆ ಮಾಡಿರುವುದು ಕಾನೂನು ಬಾಹಿರವಾಗಿರುವುದರಿಂದ Contempt of Court ದಾಖಲಿಸಲು ಸಂಘವು ಕ್ರಮವಹಿಸಲಾಗಿದೆ.

ಜೆಎಸ್ಎಸ್ ಬಡಾವಣೆ ಎರಡನೇ ಹಂತ

* ಸಂಘದ ಎರಡನೇ ಹಂತ ಬಡಾವಣೆಯು ಲಲಿತಾದ್ರಿಪುರ–ಯಾಂದಹಳ್ಳಿ ಮತ್ತು ಕುಪ್ಪಲೂರು–ಮಂಡಕಳ್ಳಿ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಅಭಿವೃದ್ಧಿಗೊಂಡಿದ್ದು. ಲಲಿತಾದ್ರಿಪುರ–ಯಾಂದಹಳ್ಳಿ ಬಡಾವಣೆಯಲ್ಲಿ ವಿವಿಧ ಅಳತೆಯ 1187 ನಿವೇಶನಗಳು ಅಭಿವೃದ್ಧಿಗೊಂಡಿದ್ದು ಮೈ.ನ.ಪ್ರಾ ದಿಂದ ಶೇ.95ರಷ್ಟು ಎಂದರೆ ವಿವಿಧ ಅಳತೆಯ 1128 ನಿವೇಶನಗಳು ಬಿಡುಗಡೆಯಾಗಿದ್ದು, 1041 ನಿವೇಶನಗಳನ್ನು ಸಂಘದ ಸದಸ್ಯರಿಗೆ ಹಂಚಿ ನೋಂದಣಿ ಮಾಡಿಕೊಟ್ಟಿದ್ದು ಉಳಿದ 87

ನಿವೇಶನಗಳಿಗೆ ಇ–ಖಾತೆ ಪಡೆಯಲು ಕ್ರಮವಹಿಸಿ 38 ನಿವೇಶನಗಳ ಇ–ಖಾತೆ ಸಂಘದ ಕಛೇರಿಯಲ್ಲಿ ಲಭ್ಯವಿದ್ದು ಉಳಿದ 49 ನಿವೇಶನಗಳ ಇ–ಖಾತೆ ಪಡೆಯಲು ಕ್ರಮವಹಿಸಲಾಗಿದೆ.

* ಸಂಘದ ಎರಡನೇ ಹಂತದ ಬಡಾವಣೆಯು ಕುಪ್ಪಲೂರು–ಮಂಡಕಳ್ಳಿ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಅಭಿವೃದ್ಧಿಗೊಂಡಿದ್ದು. ಕುಪ್ಪಲೂರು–ಮಂಡಕಳ್ಳಿ ಬಡಾವಣೆಯಲ್ಲಿ ವಿವಿಧ ಅಳತೆಯ 280 ನಿವೇಶನಗಳು ಅಭಿವೃದ್ಧಿಗೊಂಡಿದ್ದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶೇ.100ರಷ್ಟು ಬಿಡುಗಡೆಯಾಗಿದ್ದು 280 ನಿವೇಶನಗಳಲ್ಲಿ 112 ನಿವೇಶನಗಳನ್ನು ಸಂಘದ ಸದಸ್ಯರಿಗೆ ಹಂಚಿ ನೋಂದಣಿ ಮಾಡಿಕೊಟ್ಟಿದ್ದು ಉಳಿದ 168 ನಿವೇಶನಗಳಿಗೆ ಇ–ಖಾತೆ ಪಡೆಯಲು ಕ್ರಮವಹಿಸಿ 164 ನಿವೇಶನಗಳ ಇ–ಖಾತೆ ಸಂಘದ ಕಛೇರಿಯಲ್ಲಿ ಲಭ್ಯವಿದ್ದು ಉಳಿದ 4 ನಿವೇಶನಗಳ ಇ–ಖಾತೆ ಪಡೆಯಲು ಕ್ರಮವಹಿಸಲಾಗಿದೆ.
* ಲಲಿತಾದ್ರಿಪುರ/ಯಾಂದಹಳ್ಳಿ ಬಡಾವಣೆಯಲ್ಲಿ 1,2,3 & 4 ಸಂಖ್ಯೆಯ ನಿವೇಶನಗಳನ್ನು ಒಗ್ಗೂಡಿಸಿ ಸಮುದಾಯ ಭವನ ನಿರ್ಮಿಸುವುದು.

ಜೆಎಸ್‌ಎಸ್ ಬಡಾವಣೆ ಮೂರನೇ ಹಂತ

* ಸಂಘದ ಮೂರನೇ ಹಂತ ಬಡಾವಣೆಯನ್ನು ಎರಡು ಹಂತಗಳಲ್ಲಿ ಅಭಿವೃದ್ಧಿಪಡಿಸುತ್ತಿದ್ದು. ಮೂರನೇ ಹಂತದ ಫೇಸ್–01 ಬಡಾವಣೆಯ ಕಾಮಗಾರಿಗಳು ಪೂರ್ಣಗೊಂಡು ವರುಣಾ ಗ್ರಾಮ ಪಂಚಾಯಿತಿಯಿಂದ ಶೇ.60ರಷ್ಟು ಎಂದರೆ 171 ನಿವೇಶನಗಳು ಬಿಡುಗಡೆಯಾಗಿರುತ್ತದೆ. ಉಳಿದ ಶೇ.40ರಷ್ಟು ಎಂದರೆ 76 ನಿವೇಶನಗಳನ್ನು ಬಿಡುಗಡೆ ಮಾಡಲು RERA ಖಾತೆ ತೆರೆಯುವುದು ಅವಶ್ಯವಿರುವುದರಿಂದ RERA ಖಾತೆ ತೆರೆಯಲು ಕ್ರಮವಹಿಸಿದ್ದು ಆದಷ್ಟು ಬೇಗ ಉಳಿಕೆ ನಿವೇಶನಗಳನ್ನು ಬಿಡುಗಡೆ ಮಾಡಿಸಲಾಗುವುದು.
* ಸಂಘದ ಮೂರನೇ ಹಂತ ಬಡಾವಣೆಯನ್ನು ಎರಡು ಹಂತಗಳಲ್ಲಿ ಅಭಿವೃದ್ಧಿಪಡಿಸುತ್ತಿದ್ದು. ಎರಡನೇ ಹಂತದಲ್ಲಿ ಅಭಿವೃದ್ಧಿಗೊಳ್ಳಲಿರುವ 19 ಎಕರೆ 13¾ ಗುಂಟೆ ಜಮೀನಿನಲ್ಲಿ 16 ಎಕರೆ 18¾ ಗುಂಟೆ ಜಮೀನಿಗೆ ಭೂಪರಿವರ್ತನೆ ಆಗಿ ಸದರಿ ಜಮೀನಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ವಸತಿ ವಿನ್ಯಾಸ ನಕ್ಷೆ ಸಲ್ಲಿಸಿ ನಕ್ಷೆ ಅನುಮೋದನೆ ಪಡೆಯಲು ಕ್ರಮವಹಿಸಲಾಗಿದ್ದು. ನಕ್ಷೆ ದೊರೆಯುತ್ತಿದ್ದಂತೆ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಉಳಿದ 2ಎಕರೆ 35ಗುಂಟೆ ಜಮೀನಿನ ಸರ್ವೆ ನಕ್ಷೆ ವ್ಯತ್ಯಾಸವಾಗಿದ್ದು ನಕ್ಷೆ ತಿದ್ದುಪಡಿ ಮಾಡಿಸಲು ಕ್ರಮವಹಿಸಲಾಗಿದೆ. ತಿದ್ದುಪಡಿಯಾದ ಸರ್ವೆ ನಕ್ಷೆ ದೊರೆತ ನಂತರ ಭೂ ಪರಿವರ್ತನೆಗೆ ಕ್ರಮವಹಿಸಿ. ಸದರಿ ಜಮೀನಿನಲ್ಲಿ ಅಭಿವೃದ್ಧಿಗೊಳ್ಳಬೇಕಿರುವ ನಕಾಶೆಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮತಿ ಪಡೆಯಲಾಗುವುದು.

ಹೆಚ್ಚುವರಿ ಜಮೀನು ಖರೀದಿ

* ಸಂಘದಿಂದ ನಿವೇಶನ ಬಯಸಿ ನಿವೇಶನ ಮುಂಗಡ ಪಾವತಿಸಿರುವ ಎಲ್ಲಾ ಸದಸ್ಯರಿಗೂ ಮತ್ತು ಸಹಸದಸ್ಯರಿಗೂ ನಿವೇಶನ ಹಂಚುವ ಸಲುವಾಗಿ ಜಮೀನು ಖರೀದಿಸುವ ಯೋಜನೆಯನ್ನು ಆಡಳಿತಮಂಡಳಿಯು ಹೊಂದಿರುತ್ತದೆ.

08. 79ನೇ ಸ್ವಾತಂತ್ರ್ಯ ದಿನಾಚರಣೆ

2025ರ ಆಗಸ್ಟ್ 15 ರಂದು 79 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಘದ ಕಛೇರಿಯಲ್ಲಿ ಬೆಳಗ್ಗೆ 7.30ಕ್ಕೆ ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷರು ಹಾಗೂ ಮುಖ್ಯ ಅತಿಥಿಗಳಾದ ಶ್ರೀ ಕೆ.ಪಿ. ಪರಮಶಿವಯ್ಯ ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು ಇವರುಗಳು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಇವರೊಂದಿಗೆ ಈ ಕಾರ್ಯಕ್ರಮದಲ್ಲಿ ಸಂಘದ ನಿರ್ದೇಶಕರುಗಳು, ಕಛೇರಿ ಸಿಬ್ಬಂದಿಗಳು ಮತ್ತು ಮೊದಲನೇ ಹಂತದ ನಿವಾಸಿಗಳು ಉಪಸ್ಥಿತರಿದ್ದರು.

09. ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಆಚರಣೆ

ಪರಮಪೂಜ್ಯ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ದಿನಾಂಕ 20.9.2025 ರಂದು ಜೆಎಸ್‌ಎಸ್ ಎರಡನೇ ಹಂತ ಲಲಿತಾದ್ರಿಪುರ/ಯಾಂದಹಳ್ಳಿ ಬಡಾವಣೆಯಲ್ಲಿ ಆಚರಿಸಲು ಆಡಳಿತ ಮಂಡಳಿಯು ತೀರ್ಮಾನಿಸಿರುತ್ತದೆ.

10. 2024–25ನೇ ಸಾಲಿನ ಆಡಿಟ್ ವರದಿ ಅಕ್ಷೇಪಣೆಗಳಿಗೆ ಆಡಳಿತಮಂಡಳಿ ಸಮಜಾಯಿಷಿ

I. 2024–25ನೇ ಸಾಲಿನ ಆಡಿಟ್ ಅಕ್ಷೇಪಣೆಗಳು

(ಎ) ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳಿಗೆ ಅನುಪಾಲನಾ ವರದಿ

ಕ್ರ.ಸಂ	ಸಲಹೆ ಹಾಗೂ ಸೂಚನೆಗಳು	ಸಮಜಾಯಿಷಿ
1	ಹಿಂದಿನ ಸಾಲಿನಿಂದ ಅಮಾನತ್ತು ಲೆಕ್ಕಗಳು ಮುಂದುವರೆದುಕೊಂಡು ಬಂದಿದ್ದು, ಈ ಬಗ್ಗೆ ಆಡಳಿತ ಮಂಡಳಿಯವರು ಗಮನ ಹರಿಸಿ ಅಮಾನತ್ತು ಲೆಕ್ಕಗಳಿಗೆ ಸರಿಯಾದ ದಾಖಲಾತಿ ಗಳನ್ನು ಹಾಜರುಪಡಿಸಿ ಅಮಾನತ್ತು ಲೆಕ್ಕಗಳನ್ನು ಸಂಬಂಧ ಪಟ್ಟ ಖಾತೆಗಳಿಗೆ ವರ್ಗಾವಣೆ ಮಾಡಲು ಸೂಚಿಸಲಾಗಿದೆ.	ಅಮಾನತ್ತು ಲೆಕ್ಕಗಳು ಹಿಂದಿನಿಂದಲೂ ಮುಂದು ವರೆದುಕೊಂಡು ಬಂದಿರುತ್ತವೆ. ಬಹುಪಾಲು ಅಮಾನತ್ತು ಲೆಕ್ಕಗಳು 4ನೇ ಹಂತದ ಬಡಾವಣೆಗೆ ನಿವೇಶನ ಠೇವಣಿ ಪಾವತಿಸಿರುವವರಲ್ಲಿ ಹೆಚ್ಚಿನ ನಿವೇಶನಾಕಾಂಕ್ಷಿಗಳು ಬ್ಯಾಂಕಿನಲ್ಲಿ ನೇರವಾಗಿ ಹಣ ಜಮಾ ಮಾಡಿದ್ದಾರೆ. ಆದರೆ ಸಂಘದ ಕಛೇರಿಗೆ ದಾಖಲೆ ಸಲ್ಲಿಸಿರುವುದಿಲ್ಲ. 4ನೇ ಹಂತದ ಬಡಾವಣೆಗೆ ನಿವೇಶನ ಠೇವಣಿ ಪಾವತಿಸಿರುವವರು ಸಂಘಕ್ಕೆ ಸಲ್ಲಿಸಿದ್ದ ದಾಖಲೆಗಳ ಪರಿಶೀಲನೆ ಪೂರ್ಣಗೊಂಡಿದೆ. ಆದರೆ ಕೆಲವು ನಿವೇಶನಾಕಾಂಕ್ಷಿಗಳು ದಾಖಲೆ ಗಳನ್ನು ಸಲ್ಲಿಸದಿರುವ ಕಾರಣ ಅಮಾನತ್ತು ಲೆಕ್ಕಗಳನ್ನು ಸರಿಪಡಿಸಲು ತೊಡಕಾಗಿದ್ದು ಸರಿಪಡಿಸಲು ಕ್ರಮವಹಿಸಲಾಗಿದೆ.
2	2019–20ನೇ ಸಾಲಿನಲ್ಲಿ ಗುತ್ತಿಗೆದಾರರು (ಮೇ॥ ಶಾಂಭವಿ ಡೆವಲಪರ್ಸ್) ನಿರ್ವಹಿಸಲು ಕಾಮಗಾರಿಯ ಬಿಲ್ಲುಗಳನ್ನು ಪಾವತಿಸಿದ ಮೊತ್ತದಿಂದ ವರಮಾನ ತೆರಿಗೆ ರೂ.1,38,795/– ಕಟಾಯಿಸಿ ರುವುದಿಲ್ಲ. ಸರ್ಕಾರಕ್ಕೆ ರೂ.1,38,795/– ಸಹಕಾರಿ ವತಿಯಿಂದ ಪಾವತಿಸಲಾಗಿದ್ದು, ಸಂಬಂಧಪಟ್ಟವ ರಿಂದ ವಸೂಲಿ ಮಾಡಲು ಆಡಳಿತ ಮಂಡಳಿ ಯವರಿಗೆ ಸೂಚಿಸಲಾಗಿತ್ತು ಆದರೂ ಈವರೆಗೆ ಯಾವುದೇ ವಸೂಲಾತಿ ಮಾಡಿರುವುದಿಲ್ಲ. ಇದರ ಬಗ್ಗೆ ಕ್ರಮ ಅಗತ್ಯ.	M/s Shambhavi Developers ರವರ ವಿರುದ್ಧ Cheque Bounce ಪ್ರಕರಣಕ್ಕೆ ಸಂಬಂಧಿಸಿದಂತೆ 5th ACJ & JMFC ನ್ಯಾಯಾಲಯದಲ್ಲಿ ದಾವಾ ಸಂಖ್ಯೆ CC No 2309/2021 ದಾಖಲಿಸಿದ್ದು, ಮುಂದಿನ ವಿಚಾರಣೆಯು ದಿನಾಂಕ: 16.09.2025 ರಂದು ನ್ಯಾಯಾಲಯದಲ್ಲಿ ನಿಗಧಿಯಾಗಿರುತ್ತದೆ

3.	ಸದಸ್ಯರ ಷೇರು ಮೊತ್ತಕ್ಕೂ ಹಾಗೂ ಸಂಘದ ಕುಳುವಾರು ಪಟ್ಟಿಗೂ ವ್ಯತ್ಯಾಸ ಕಂಡುಬಂದಿದ್ದು, ಈ ಬಗ್ಗೆ ಆಡಳಿತ ಮಂಡಳಿಯವರು ಸೂಕ್ತ ಕ್ರಮ ಕೈಗೊಂಡು ಸರಿಯಾದ ಸದಸ್ಯರ ಹಾಗೂ ಸಹ ಸದಸ್ಯರ ಷೇರು ಕುಳುವಾರು ಪಟ್ಟಿಯನ್ನು ಹೊಂದಲು ಸೂಚಿಸಲಾಗಿದೆ.	ಷೇರು ವ್ಯತ್ಯಾಸವನ್ನು ಸರಿಪಡಿಸಲು ಕ್ರಮವಹಿಸ ಲಾಗಿದೆ.
4.	ಸಂಘದ ಉದ್ದೇಶಿತ ಬಡಾವಣೆಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ ಸದಸ್ಯರಿಗೆ ಹೆಚ್ಚಿನ ಹೊರೆಯಾಗದಂತೆ ಕ್ರಮವಿಡಲು ಆಡಳಿತ ಮಂಡಳಿಯವರಿಗೆ ಸೂಚಿಸಲಾಗಿದೆ.	ಕಾನೂನಾತ್ಮಕವಾಗಿ ಅಥವಾ ಮತ್ತ್ಯಾವುದೇ ತೊಡಕು/ಸಮಸ್ಯೆಗಳು ಇಲ್ಲದಿದ್ದಲ್ಲಿ ಸಂಘದ ಉದ್ದೇಶಿತ ಬಡಾವಣೆಯನ್ನು ನಿಗದಿತ ಅವಧಿ ಯೊಳಗಾಗಿ ಪೂರ್ಣಗೊಳಿಸಿ ಸದಸ್ಯರಿಗೆ ಹಂಚಲು ಕ್ರಮವಹಿಸಲಾಗುತ್ತಿದೆ.
5.	ಸಂಘದ ಎಲ್ಲಾ ಲೆಕ್ಕ ಪತ್ರಗಳನ್ನು ಗಣಕೀಕೃತ ಗೊಳಿಸಲು ಸೂಚಿಸಿದ್ದರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಈ ಬಗ್ಗೆ ಗಮನ ಹರಿಸಲು ಸೂಚಿಸಲಾಗಿದೆ.	ಸಂಘದ ಹಣಕಾಸು ವ್ಯವಹಾರಗಳನ್ನು Tally Software ಮೂಲಕ ಕಳೆದ ಮೂರು ವರ್ಷಗಳಿಂದಲೂ ನಿರ್ವಹಿಸಲಾಗುತ್ತಿದೆ. Customised Software ಅಳವಡಿಕೆಗೆ ಸಂಘವು ಕ್ರಮವಹಿಸಲಾಗುವುದು.
6.	ಸಂಘದಲ್ಲಿ ಅಪದ್ಧನ ನಿಧಿಯನ್ನು ನಿಯೋಜನೆ ಮಾಡಲಾಗಿದ್ದು ಸಹಕಾರಿ ಕಾಯ್ದೆ ಪ್ರಕಾರ ಅಪದ್ಧನ ನಿಧಿಯ ಮೊತ್ತವು ರೂ.36,89,038/- ಗಳಿದ್ದು ಈ ಮೊತ್ತದಲ್ಲಿ ರೂ.7,07,476/- ಗಳಷ್ಟು ಮೊತ್ತವನ್ನು ಅಪದ್ಧನ ನಿಧಿಯ ಠೇವಣಿಯಾಗಿ ಪ್ರತ್ಯೇಕವಾಗಿ ಬ್ಯಾಂಕಿನಲ್ಲಿ ಠೇವಣಿ ಮಾಡಿರುವುದು ಕಂಡು ಬಂದಿರುತ್ತದೆ. ಆದರೆ ಸಹಕಾರಿ ಕಾಯ್ದೆ ಅನುಗುಣವಾಗಿ ಅಪದ್ಧನ ನಿಧಿಯ ಒಟ್ಟು ಮೊತ್ತದಲ್ಲಿ ರೂ.29,81,562/- ಗಳಷ್ಟು ಮೊತ್ತವು ಕಡಿಮೆ ವಿನಿಯೋಗಿಸಿದ್ದು ಈ ಮೊತ್ತವನ್ನು ಹೊಂದಿಸಿ ಠೇವಣಿಯಾಗಿ ವಿನಿಯೋಗಿಸಲು ಸೂಚಿಸಲಾಗಿದೆ. ಈ ಬಗ್ಗೆ ಆಡಳಿತ ಮಂಡಳಿ ಯವರು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.	ಸಂಘದ ಅಪದ್ಧನ ನಿಧಿಯಲ್ಲಿ ಈಗಾಗಲೇ ರೂ 7,07,476/–ಗಳನ್ನು ಒಅಅಅಅ ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿದೆಯಲ್ಲದೆ ಸದರಿ ಬ್ಯಾಂಕಿನಲ್ಲಿ ಸಂಘವು ರೂ 2,60,00,000/–ಗಳನ್ನು ಅವಧಿಗೆ ಠೇವಣಿ ಮಾಡಿರುತ್ತದೆ. ಠೇವಣಿ ಅವಧಿ ಮುಗಿದ ನಂತರ ರೂ 29,81,562/–ಗಳನ್ನು ಅಪದ್ಧನ ನಿಧಿಯ ಠೇವಣಿಗೆ ವರ್ಗಾಯಿಸಿ ಸರಿಪಡಿಸಲು ಕ್ರಮ ವಹಿಸಲಾಗುವುದು.

7.	ಅಮಾನತ್ತು ಖಾತೆಯಲ್ಲಿ ಮೊತ್ತವಿದ್ದು ಈ ಮೊತ್ತವನ್ನು ಸರಿಯಾದ ದಾಖಲೆಗಳೊಂದಿಗೆ ವರ್ಗಾವಣೆ ಮಾಡಿಕೊಳ್ಳಲು ಸೂಚಿಸಲಾಗಿದೆ.	ಅಮಾನತ್ತು ಖಾತೆ ಮೊತ್ತವನ್ನು ದಾಖಲೆಗಳೊಂದಿಗೆ ಪರಿಶೀಲಿಸಿ ಸರಿಪಡಿಸಲು ಕ್ರಮವಹಿಸಲಾಗುವುದು.
8.	ಲೆಕ್ಕ ಪತ್ರಗಳನ್ನು ಮಾಸಿಕವಾಗಿ ಅಚ್ಚುಕಟ್ಟಾಗಿ ನಿರ್ವಹಿಸಿ ಸಂಬಂಧಪಟ್ಟ ಸದಸ್ಯರ ಖಾತೆಗಳಿಗೆ ತಾಳೆ ಮಾಡಿಕೊಳ್ಳಲು ಸೂಚಿಸಲಾಗಿದೆ. ಹಾಗೆಯೇ ಬ್ಯಾಂಕ್ ಖಾತೆಗಳಿಗೆ ನೇರ ಜಮೆ ಆಗಿರುವ ಮೊಬಲಗನ್ನು ಆಗಿಂದಾಗೆ ಪರಿಶೀಲಿಸಿ ಮಾಸಿಕ ಅಂತ್ಯಕ್ಕೆ ಲೆಕ್ಕ ಪುಸ್ತಕಕ್ಕೆ ತಾಳೆ ಮಾಡಿಕೊಳ್ಳಲು ಸೂಚಿಸಲಾಗಿದೆ.	ಸಂಘದ ಲೆಕ್ಕಪತ್ರಗಳನ್ನು ಮಾಸಿಕವಾಗಿ ಪರಿಶೀಲಿಸಿ reconcile ಮಾಡಿ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಿರುವ ಸದಸ್ಯರಿಂದ ದಾಖಲಾತಿಗಳನ್ನು ಪಡೆದು ಸಂಬಂಧಪಟ್ಟ ಖಾತೆಗಳಿಗೆ ವರ್ಗಾಯಿಸಲು ಕ್ರಮವಹಿಸಲಾಗಿದೆ.
9.	ಇಎಸ್‌ಎಸ್ & ಇಎಸ್‌ಎಸ್ ಇಕೋ ವ್ಯಾಲಿ ಇಂಕ್ ಇವರಿಂದ ರೂ. 1,56,40,480/–ಗಳು ಟಿಡಿಎಸ್ ಬಾಬ್ತು ಬಾಕಿಯಿದ್ದು ಹಾಗೆ ಈ ಬಾಬ್ತುವಿನ ವಿಚಾರವಾಗಿ ಯಾವುದೇ ವಿವರ ಒದಗಿಸಿರುವುದಿಲ್ಲ. ಈ ಬಗ್ಗೆ ಮೊತ್ತವನ್ನು ವಸೂಲಿ ಮಾಡಲು ಆಡಳಿತ ಮಂಡಳಿಯವರು ಕ್ರಮ ಕೈಗೊಳ್ಳಲು ಸೂಚಿಸಲಾಗಿತ್ತು ಆದರೆ ಈವರೆಗೆ ಯಾವುದೇ ರೀತಿಯಾದ ವಸೂಲಾತಿಯು ಕಂಡು ಬಂದಿರುವುದಿಲ್ಲ. ಈ ಬಗ್ಗೆ ಗಮನ ಹರಿಸಲು ಸೂಚಿಸಲಾಗಿದೆ.	M/s ESS & ESS Eco Valley Inc., ರವರಿಂದ ಬರಬೇಕಾದ ಟಿಡಿಎಸ್ ಬಾಬ್ತು ಹಣ 1,56,40,480/– ರೂಗಳನ್ನು ಮುಂಗಡ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಸಂಘವು ಕ್ರಮವಹಿಸಲಿದೆ.
10.	ಸದಸ್ಯರ ನಿವೇಶನ ಮುಂಗಡಗಳಿಗೂ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಯ ನಿವೇಶನ ಮುಂಗಡ ಕುಳುವಾರು ತಃಖ್ತೆಗೂ ತಾಳೆಯಾಗದೆ ಕುಳುವಾರು ವ್ಯತ್ಯಾಸಸ ಇರುವುದು ಕಂಡುಬಂದಿದ್ದು ಈ ಬಗ್ಗೆ ಕ್ರಮ ಅಗತ್ಯ.	ಆಸ್ತಿ– ಜವಾಬ್ದಾರಿ ತಃಖ್ತೆ ಪ್ರಕಾರ ಸದಸ್ಯರಿಂದ ಬಂದ ನಿವೇಶನ ಮುಂಗಡ ಮೊತ್ತ ಮತ್ತು ಕುಳುವಾರು ಪಟ್ಟಿಯ ಪ್ರಕಾರ ಇರುವ ಮೊತ್ತ ಹಿಂದಿನ ಸಾಲುಗಳಿಂದ ತಾಳೆಯಾಗಿರುವುದಿಲ್ಲ. ಇದನ್ನು ಸರಿಪಡಿಸಲು ಸಂಘವು ಕ್ರಮವಹಿಸುತ್ತಿದೆ.
11	ಅಭಿವೃದ್ಧಿ ಹಂತದಲ್ಲಿ ಇರುವ ನಿವೇಶನಗಳ ಬಗ್ಗೆ ಸಂಘವು ಅಭಿವೃದ್ಧಿದಾರರಿಂದ ಅಭಿವೃದ್ಧಿ ಕಾಮಗಾರಿಯ ಸ್ಟೇಟಸ್ ಮತ್ತು ಪ್ರೋಗ್ರೆಸ್	ಸಂಘವು ಅಭಿವೃದ್ಧಿದಾರರಿಗೆ ಮುಂಗಡ ಹಣ ಪಾವತಿಗೆ ಮುನ್ನ ಸಂಘದ ನಿವೇಶನ ಅಭಿಯಂತರರು ಅಭಿವೃದ್ಧಿಪಡಿಸುತ್ತಿರುವ

	ರಿಪೋರ್ಟ್ ಹಾಗೂ ಸಂಘದ ವತಿಯಿಂದ ನುರಿತ ತಜ್ಞರಿಂದ ಪರಿವೀಕ್ಷಣೆ ಮಾಡಿಸಿ ಅಭಿವೃದ್ಧಿದಾರರಿಗೆ ಮುಂಗಡವನ್ನು ಬಿಡುಗಡೆ ಮಾಡಲು ಸೂಚಿಸಲಾಗಿದೆ.	ಬಡಾವಣೆಗಳಿಗೆ ಭೇಟಿ ನೀಡಿ ಪರಿವೀಕ್ಷಿಸಿ ತಮ್ಮ ವರದಿಯಲ್ಲಿ ಅಭಿವೃದ್ಧಿಪಡಿಸುತ್ತಿರುವ ಕಾಮಗಾರಿ ಮೊತ್ತವನ್ನು ತಿಳಿಸುತ್ತಾರೆ. ಅಭಿವೃದ್ಧಿದಾರರು ನೀಡುವ ಅಭಿವೃದ್ಧಿ ಕಾಮಗಾರಿಯ ಸ್ಟೇಟಸ್ ಮತ್ತು ಪ್ರೋಗ್ರೆಸ್ ವರದಿಯನ್ನು ಸಂಘದ ನಿವೇಶನ ಅಭಿಯಂತರರು ನೀಡುವ ವರದಿ ಜೊತೆಗೆ ತುಲನೆಮಾಡಿ, ಅಭಿವೃದ್ಧಿ ಕಾಮಗಾರಿಯು ಮೊತ್ತವನ್ನು ಪರಿಶೀಲಿಸಿಯೇ ಅಭಿವೃದ್ಧಿ ಕಾಮಗಾರಿಯ ಮುಂಗಡ ಹಣ ಪಾವತಿಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ. ಇನ್ನು ಮುಂದೆಯು ಇದೇ ಪದ್ಧತಿಯನ್ನು ಮುಂದುವರಿಸಲಾಗುವುದು.
12.	ಸದರಿ ಸಹಕಾರಿಯು 24.02.2016 ರಲ್ಲಿ ಶಾಂಭವಿ ಡೆವಲಪರ್ಸ್‌ರವರಿಗೆ 3 ನೇ ಹಂತದ ಬಡಾವಣೆ ನಿರ್ಮಾಣಕ್ಕೆ ಕರಾರು ಮಾಡಿಕೊಂಡಿದ್ದು ಅದರ ಅನ್ವಯ ಒಟ್ಟು ರೂ. 14,84,39,770/- ಗಳನ್ನು ನೀಡಲಾಗಿದ್ದು, ನಿರ್ಮಾಣ ಕಾಮಗಾರಿಯು ಅಪೂರ್ಣವಾಗಿದ್ದು ಸಂಘವು ಈ ಸಂಸ್ಥೆ ಮೇಲೆ ಕಾನೂನು ಕ್ರಮ ಜರುಗಿಸಿದ್ದು ಅದನ್ನು ಅದಷ್ಟು ಶೀಘ್ರವಾಗಿ ಇತ್ಯರ್ಥಗೊಳಿಸಲು ಸೂಚಿಸಲಾಗಿದೆ.	ಸಂಘವು ಮೆ॥ ಶಾಂಭವಿ ಡೆವಲಪರ್ಸ್ ವಿರುದ್ಧ ರೂ.9,06,03,488/-ಗಳನ್ನು ವಸೂಲಿ ಮಾಡಲು Commercial court and II Addutional District Session Judge ಮೈಸೂರು ಇಲ್ಲಿ Execution Petition No:Com. Ex/ 296/ 2024 ದಾಖಲಿಸಿದ್ದು, ವಿಚಾರಣೆಯು ಪ್ರಗತಿಯಲ್ಲಿರುತ್ತದೆ. ಮುಂದಿನ ವಿಚಾರಣೆಯು ದಿನಾಂಕ: 13.10.2025 ನಿಗಧಿಯಾಗಿರುತ್ತದೆ.
13.	ಸಂಘದ 4 ನೇ ಹಂತದ ನಿವೇಶನ ಖರೀದಿ ಮತ್ತು ಬಡಾವಣೆ ನಿರ್ಮಾಣ ಸಂಬಂಧ ಇಎಸ್‌ಎಸ್ & ಇಎಸ್‌ಎಸ್ ಇಕೋ ವ್ಯಾಲಿ ಸಂಸ್ಥೆಯವರಿಗೆ 2010-15 ನೇ ಸಾಲಿನ ಆಡಳಿತ ಮಂಡಳಿಯು ಒಟ್ಟು ರೂ. 106,74,20,000/- ಗಳನ್ನು ನೀಡಿರುತ್ತಾರೆ. ಸದರಿ ಸಂಸ್ಥೆಯು ಈ ವರೆಗೆ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಂಘಕ್ಕೆ	ಹಿಂದಿನ ಆಡಳಿತ ಮಂಡಳಿಗಳು ಮತ್ತು ಪ್ರಸ್ತುತ ಆಡಳಿತಮಂಡಳಿ ನಾಲ್ಕನೇ ಹಂತದ ಅಭಿವೃದ್ಧಿ ಸಂಸ್ಥೆಯಾದ M/s ESS & ESS Eco Vally Incಗೆ ಹಲವು ಬಾರಿ ಪತ್ರ ಬರೆದು ನಿವೇಶನಗಳನ್ನು ಅಭಿವೃದ್ಧಿಪಡಿಸಿ ಸಂಘಕ್ಕೆ ನೀಡಬೇಕೆಂದು ಕೋರಿರುತ್ತೇವೆ. ಅಲ್ಲದೆ ಸದರಿ ಸಂಸ್ಥೆಯ ನಿರ್ವಾಹಕ ನಿರ್ದೇಶಕರಾದ ಶ್ರೀ ಶ್ರೀಕಾಂತ್‌ದಾಸ್ ರವರನ್ನು ಖುದ್ದಾಗಿ

	ಸಲ್ಲಿಸಿರುವುದಿಲ್ಲ. ಹಾಗೆಯೇ ನಿವೇಶನ ಅಭಿವೃದ್ಧಿಯ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ. ಆದ್ದರಿಂದ ಸಂಘವು ಈ ಮೊತ್ತವನ್ನು ವಸೂಲಿ ಮಾಡಲು ಸೂಚಿಸಲಾಗಿದೆ.	ಭೇಟಿಮಾಡಿ ನಾಲ್ಕನೇ ಹಂತದ ಬಡಾವಣೆ ಸಂಬಂಧ ಮನವಿ ನೀಡಿ ಮಾತುಕತೆ ನಡೆಸಲಾಗಿದೆ. ಪ್ರಸ್ತುತ ಆಡಳಿತ ಮಂಡಳಿಯು ಇದಕ್ಕೆ ಹೆಚ್ಚಿನ ಒತ್ತು ನೀಡಿ ನಿವೇಶನಗಳನ್ನು ಅಭಿವೃದ್ಧಿದಾರರಿಂದ ಪಡೆದು ಸದಸ್ಯರಿಗೆ ಮತ್ತು ಸಹಸದಸ್ಯರಿಗೆ ನೀಡಲು ಸರ್ವಪ್ರಯತ್ನವನ್ನು ಮಾಡುತ್ತಿದೆ.
14.	ಸದರಿ ಸಂಘವು ಬಡಾವಣೆ ನಿರ್ಮಾಣ ಮಾಡುವ ಅಭಿವೃದ್ಧಿದಾರರ ಪೂರ್ವ ಹಿನ್ನೆಲೆಯನ್ನು ಪರಿಶೀಲಿಸಿ ಮತ್ತು ಅವರ ಆರ್ಥಿಕ ತಃಖ್ತೆಗಳನ್ನು ಅವಲೋಕಿಸಿ ಮತ್ತು ಕಾಮಗಾರಿಗೆ ನೀಡಲಾದ ಮೊತ್ತಕ್ಕೆ ಸರಿಯಾದ ಭದ್ರತೆ ಮತ್ತು ಬ್ಯಾಂಕ್ ಗ್ಯಾರಂಟಿಯನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ.	ಹೊಸ ಬಡಾವಣೆಗಳ ನಿರ್ಮಾಣ ಸಂಬಂಧ ಅಭಿವೃದ್ಧಿದಾರರ ಜೊತೆಗೆ ಕರಾರು ಮಾಡಿಕೊಳ್ಳುವಾಗ ಅಭಿವೃದ್ಧಿದಾರರ ಪೂರ್ವ ಹಿನ್ನಲೆಯನ್ನು ಪರಿಶೀಲಿಸಿ, ಅವರ ಆರ್ಥಿಕ ತಃಖ್ತೆಗಳನ್ನು ಅವಲೋಕಿಸಿ ಮತ್ತು ಕಾಮಗಾರಿಗೆ ನೀಡಲಾದ ಮೊತ್ತಕ್ಕೆ ಸರಿಯಾದ ಭದ್ರತೆ/ಬ್ಯಾಂಕ್ ಗ್ಯಾರಂಟಿಯನ್ನು ತೆಗೆದುಕೊಳ್ಳಲಾಗುವುದು.

11. ನಿರ್ಧಿಷ್ಟ ಮೀಸಲು ನಿಧಿ ಮತ್ತು ಇತರೆ ನಿಧಿಗಳನ್ನು ಸೃಜಿಸುವುದು

ಹಿಂದಿನ ಸಾಲುಗಳ ಲಾಭ-ನಷ್ಟಗಳನ್ನು ಹೊಂದಾಣಿಕೆ ಮಾಡಿಕೊಂಡ ನಂತರವೂ 2023-24ನೇ ಸಾಲಿನವರೆಗೆ ನಿವ್ವಳ ನಷ್ಟ ಒಟ್ಟು ರೂ 63,08,100/-ಆಗಿರುತ್ತದೆ. 2024-25ನೇ ಸಾಲಿನಲ್ಲಿ ನಿವ್ವಳ ಲಾಭ ರೂ 86,57,916/- ಆಗಿರುತ್ತದೆ.

12. 2024-25ನೇ ಸಾಲಿನವರೆಗಿನ ನಿವ್ವಳ ಲಾಭಾಂಶದಲ್ಲಿ ಸೃಜಿಸಿರುವ ವಿವಿಧ ನಿಧಿಗಳು

2024-25ನೇ ಅವಧಿಯವರೆಗಿನ ನಿವ್ವಳ ಲಾಭಾಂಶದಲ್ಲಿ ಸೃಜಿಸಿರುವ ವಿವಿಧ ನಿಧಿಗಳ ಮೊಬಲಗು ಕೆಳಕಂಡಂತಿದೆ. ದಿನಾಂಕ 30.11.2021ರಂದು ರೂ 7,07,476/-ಗಳನ್ನು MCDCC Bank ನಲ್ಲಿ ಠೇವಣಿಯಲ್ಲಿ ತೊಡಗಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಸಂಘದ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮೀಸಲು ನಿಧಿಗಳಲ್ಲಿ ತೊಡಗಿಸಲಾಗುವುದು.

ಅಪದ್ಧನ ನಿಧಿ/ಮೀಸಲು ನಿಧಿ	36,89,038.03
ಧರ್ಮದ ನಿಧಿ	1,56,542.70
ಕಟ್ಟಡದ ನಿಧಿ	3,69,047.50
ಸದಸ್ಯರ ಮರಣೋತ್ತರ ನಿಧಿ	2,67,287.60
ಒಟ್ಟು	44,81,915.83

13. 2024–25ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ

2024–25ನೇ ಸಾಲಿನ ಸಂಘದ ಲೆಕ್ಕಪತ್ರಗಳ ಪರಿಶೋಧನೆಯನ್ನು ಶ್ರೀ ಹೆಚ್.ಸಿ. ಮಂಜುನಾಥ್, ಚಾರ್ಟರ್ಡ್ ಅಕೌಂಟೆಂಟ್, ಶಿವಮೊಗ್ಗ, ಇವರು ನಿರ್ವಹಿಸಿರುತ್ತಾರೆ. 2025–26ನೇ ಸಾಲಿನ ಸಂಘದ ಲೆಕ್ಕಪತ್ರಗಳ ಪರಿಶೋಧನೆಗೆ ಅವಕಾಶ ಕೋರಿ ಕೆಳಕಂಡವರುಗಳಿಂದ ಕೋರಿಕೆ ಬಂದಿರುತ್ತದೆ.

(i) i. M.C Rajendra, Chartered Accountant, Shimogga

(ii) Bharath Raj & Co, Chartered Accountant, Thanneeruhalla, Hassan

(iii) E.S and Associate, Chartered Accountant, Mysuru

(iv) Sangamesh & Associates, Chartered Accountant, Bengaluru

2023–24 ಮತ್ತು 2024–25ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಶ್ರೀ ಹೆಚ್.ಸಿ. ಮಂಜುನಾಥ್, ಚಾರ್ಟರ್ಡ್ ಅಕೌಂಟೆಂಟ್, ಶಿವಮೊಗ್ಗ, ಇವರು ನಿರ್ವಹಿಸಿರುತ್ತಾರೆ. ಸಹಕಾರ ಸಂಘಗಳ ನಿಯಮಗಳ ರೀತ್ಯಾ ಎರಡು ವರ್ಷಗಳ ನಂತರ ಲೆಕ್ಕಪರಿಶೋಧಕರನ್ನು ಬದಲಾವಣೆ ಮಾಡಬೇಕಾಗಿರುತ್ತದೆ. ಈ ಮಾಹಿತಿಯೊಂದಿಗೆ 2025–26ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಕ್ಕೆ ಸಭೆ ಅನುಮತಿ ಕೋರಿದೆ.

14. 2026–27ನೇ ಸಾಲಿನ ಆಯವ್ಯಯ ಮಂಡನೆ ಮತ್ತು ಅನುಮೋದನೆ

(a) 2026–27ನೇ ಸಾಲಿನ ಕರಡು ಆಯವ್ಯಯ ಪಟ್ಟಿಯನ್ನು ಸರ್ವ ಸದಸ್ಯರ ಸಭೆ ಅನುಮೋದನೆಗೆ ಮಂಡಿಸಲಾಗಿದೆ.

ಕ್ರ.ಸಂ.	ವಿವರ	2024–25ರ ಅಂದಾಜು	2024–25ರ ವೆಚ್ಚ	2025–26ರ ಅಂದಾಜು	ಜುಲೈ–2025 ರವರೆಗೆ ಆಗಿರುವ ವೆಚ್ಚ	2026–27ರ ಅಂದಾಜು ವೆಚ್ಚ
1	ಸಿಬ್ಬಂದಿ ವೇತನ	22,00,000	17,20,977	20,00,000	5,82,324	23,00,000
2	ನಿರ್ವಹಣಾ ವೆಚ್ಚ :					
	(ಅ) ಮೊದಲ ಹಂತ	-	-	-	16,890	20,000
	(ಆ) ಎರಡನೇ ಹಂತ	20,00,000	41,84,159	25,00,000	10,76,924	25,00,000
	(ಇ) ಮೂರನೇ ಹಂತ	-	4,78,063	5,00,000	1,00,157	10,00,000
3	ವಿದ್ಯುಚ್ಛಕ್ತಿ, ನೀರಿನ ವೆಚ್ಚ	25,000	11,881	25,000	7,362	20,000
4	ಪ್ರಿಂಟಿಂಗ್ ಮತ್ತು ಸ್ಟೇಷನರಿ	50,000	41,137	50,000	16,474	50,000
5	ಅಂಚೆ ಹಾಗೂ ಕೊರಿಯರ್ ವೆಚ್ಚ	10,000	46,388	50,000	4,416	60,000
6	ದೂರವಾಣಿ ವೆಚ್ಚ	15,000	7,700	15,000	3,543	15,000
7	ಆಡಿಟ್ ಶುಲ್ಕ, ಆದಾಯ ತೆರಿಗೆ ಮತ್ತು ಟಿ.ಡಿ.ಎಸ್ ಫೈಲಿಂಗ್ ವೆಚ್ಚ	6,00,000	6,10,100	6,00,000	4,25,206	6,00,000
8	ವಕೀಲರ ವೃತ್ತಿ ಶುಲ್ಕ	25,00,000	48,85,750	25,00,000	21,54,500	45,00,000
9	ವಾರ್ಷಿಕ ಮಹಾಸಭೆಯ ಖರ್ಚು	5,00,000	4,23,712	5,00,000	-	5,00,000
10	ಮಾಸಿಕ ಸಭೆ ಮತ್ತು ಭತ್ಯೆ ವೆಚ್ಚ	2,00,000	1,73,816	2,00,000	54,104	2,00,000
11	ಜಾಹೀರಾತು ವೆಚ್ಚ	1,00,000	73,710	2,00,000	13,326	2,00,000
12	ಸಹಕಾರ ಸಂಸ್ಥೆ ಹಾಗೂ ಇತರೆ ಸಂಸ್ಥೆಗಳಿಗೆ ವಂತಿಕೆ	50,000	-	50,000	-	50,000
13	ಪ್ರಯಾಣ ವೆಚ್ಚ	50,000	1,28,709	1,00,000	73,305	2,00,000
14	ಪೀಠೋಪಕರಣ ಮತ್ತು ಕಂಪ್ಯೂಟರ್	50,000	1,04,528	1,50,000	6,490	2,00,000
15	ಕಛೇರಿ ವೆಚ್ಚ	2,50,000	1,86,612	3,00,000	64,076	3,00,000
16	ಪ್ರತಿಭಾ ಪುರಸ್ಕಾರ ವೆಚ್ಚ	20,000	20,000	20,000	-	20,000
17	ಇತರೆ ವೆಚ್ಚ	2,00,000	2,37,721	5,00,000	1,13,134	5,00,000
18	ಆದಾಯ ತೆರಿಗೆ ವೆಚ್ಚ	1,00,000	1,10,800	2,00,000	-	2,00,000
19	ಆಸ್ತಿ ತೆರಿಗೆ ವೆಚ್ಚ	60,000	72,706	1,00,000	74,793	1,00,00
20	ಪರಮ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವ ವೆಚ್ಚ	2,00,000	4,49,214	3,00,000	-	3,00,000
21	ಚುನಾವಣೆ ವೆಚ್ಚ	8,00,000	2,73,296	-	85,391	-

(b) ಈ ಕೆಳಕಂಡ ಶೀರ್ಷಿಕೆಯಡಿ ಅನುಮೋದಿತ ಆಯವ್ಯಯಕ್ಕಿಂತ ಹೆಚ್ಚುವರಿ ವೆಚ್ಚವಾಗಿದ್ದು ಅನುಮೋದನೆ ಕೋರಿದೆ.

ಕ್ರ.ಸಂ.	ವಿವರ	ಹೆಚ್ಚುವರಿಯಾಗಿ ಆಗಿರುವ ವೆಚ್ಚ
1	ಮೂರನೇ ಹಂತ	4,78,063.00
2	ಅಂಚೆ ಮತ್ತು ಕೋರಿಯರ್	36,380.00
3	ಆಡಿಟ್ ಶುಲ್ಕ ಆದಾಯ ತೆರಿಗೆಗೆ TDS ಮೇಲಿನ ವೆಚ್ಚ	10,100.00
4	ವಕೀಲರ ವೃತ್ತಿ ಶುಲ್ಕ	23,85,750
5	ಪ್ರಯಾಣ ವೆಚ್ಚ	78,709.00
6	ಪೀಠೋಪಕರಣ ಮತ್ತು ಕಂಪ್ಯೂಟರ್	54,528.00
7	ಇತರೆ ವೆಚ್ಚ	37,721.00
8	ಆದಾಯ ತೆರಿಗೆ	10,800.00
9	ಆಸ್ತಿ ತೆರಿಗೆ	12,706.00
10	ಪರಮ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವ ವೆಚ್ಚ	2,49,214.00

15. ವಿಚಾರಣಾ ವರದಿ ಪರಿಗಣನೆ

(i) ನಿಬಂಧಕರು, ಸಹಕಾರ ಇಲಾಖೆ (ವಸತಿ ಮತ್ತು ಇತರೆ) ಇವರು ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64ರಡಿ ಜರುಗಿದ ವಿಚಾರಣಾ ವರದಿಯ ಮೇಲೆ ಕಲಂ 68ರ ಆದೇಶ ಹೊರಡಿಸಿರುವ ಕುರಿತು

2015–20ರ ಅವಧಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು 10 ಆರೋಪಗಳ ಬಗ್ಗೆ (ಹೆಚ್ಚುವರಿ ಆರೋಪವೂ ಸೇರಿದಂತೆ) ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64ರ ರೀತ್ಯಾ ಸಹಕಾರ ಸಂಘಗಳ ಉಪನಿಬಂಧಕರು ಚಾಮರಾಜನಗರ ಜಿಲ್ಲೆ, ಇವರು ವಿಚಾರಣೆ ನಡೆಸಿ ವರದಿ ನೀಡಿರುತ್ತಾರೆ. ಈ ವರದಿ ಆದರಿಸಿ ಅಪರ ನಿಬಂಧಕರು ಪ್ರತಿ ಆರೋಪದ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 68 ರಡಿ ನಿರ್ದೇಶನ ಹೊರಡಿಸಿರುತ್ತಾರೆ. ಈ ನಿರ್ದೇಶನದನ್ವಯ ಸಂಘವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಪರ ನಿಬಂಧಕರಿಗೆ ಆಗಿಂದಾಗ್ಗೆ ಸಂಘವು ಅನುಪಾಲನಾ ವರದಿ ಸಲ್ಲಿಸುತ್ತಿದೆ.

ಸಂಘವು ಸಲ್ಲಿಸುತ್ತಿದ್ದ ಅನುಪಾಲನಾ ವರದಿಯನ್ನು ಇಲಾಖೆಯು ವಿಮರ್ಶಿಸಿ ಆರೋಪ ಸಂಖ್ಯೆ 1, 2, 3, 5, 9, ಮತ್ತು ಹೆಚ್ಚುವರಿ ಆರೋಪ –1 ಈ ಆರೋಪಗಳನ್ನು ಕೈಬಿಡಲಾಗಿದೆ. ಉಳಿದಂತೆ ನಾಲ್ಕು ಆರೋಪಗಳ (ಅರೋಪ ಸಂಖ್ಯೆ 4, 6, 7, 8) ಬಗ್ಗೆ ಮಾತ್ರ ಸಂಘವು ಕ್ರಮವಹಿಸಬೇಕಾಗಿದೆ. ವಿವರ ಕೆಳಕಂಡಂತಿದೆ.

ಆರೋಪ ಸಂಖ್ಯೆ–4ರ ಇಲಾಖಾ ನಿರ್ದೇಶನ

ಈ ಆರೋಪಕ್ಕೆ ಸಂಬಂಧಿಸಿದಂತೆ ದಿನಾಂಕ: 31.01.2025ರ ಇಲಾಖಾ ನಿರ್ದೇಶನ ಮೆ. ಶಾಂಭವಿ ಡೆವಲಪರ್ಸ್ ರವರಿಂದ ವಸೂಲಾಗಬೇಕಾದ ಮೊತ್ತಕ್ಕೆ ದಿನಾಂಕ:14.10.2024ರಂದು Execution Petition ದಾಖಲಿಸಿದ್ದು, ಈಗಾಗಲೇ 3 ತಿಂಗಳು ಕಳೆದಿದ್ದು ಮೊತ್ತ ವಸೂಲಾಗಿರುವ ಬಗ್ಗೆ ವಿವರಗಳನ್ನು ಸಲ್ಲಿಸಿರುವುದಿಲ್ಲ. ಈಗಾಗಲೇ ಸಾಕಷ್ಟು ಕಾಲ ವಿಳಂಬವಾಗಿದ್ದು, ನಿಗಧಿತ ಅವಧಿಯೊಳಗೆ ಮೊತ್ತ ವಸೂಲಿ ಮಾಡಿ ಅನುಪಾಲನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ ಸಂಘವು ಕ್ರಮವಹಿಸುತ್ತಿದೆ.

ಆರೋಪ ಸಂಖ್ಯೆ–6ರ ಇಲಾಖಾ ನಿರ್ದೇಶನ

ವಿಚಾರಣಾ ವರದಿಯಲ್ಲಿ ಸ್ಪಷ್ಟಪಡಿಸಿರುವಂತೆ ಸಭಾ ನೋಟೀಸನ್ನು ನಿಯಮಾನುಸಾರ ಜಾರಿಗೊಳಿಸದೆ ಮತ್ತು ಸಭಾ ವಿಷಯವನ್ನು ನಮೂದಿಸದೆ ನಡೆಸಿರುವ ಸಭೆಗಳು ನಿರರ್ಥಕ ಸಭೆಗಳಾಗಿರುತ್ತವೆ. ಇಂತಹ ಸಭೆಯ ನಿರ್ಣಯಗಳನ್ನು ಅನುಸರಿಸಿ ಕ್ರಮ ಕೈಗೊಂಡಿರುವ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಸಹಕಾರ ಸಂಘಗಳ ಕಾಯ್ದೆ ಕಲಂ 29–ಸಿ ರೀತ್ಯಾ ಕ್ರಮಕ್ಕೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಇಂತಹ ಸಭೆಗಳಲ್ಲಿ ಪಡೆದುಕೊಂಡಿರುವ ಎಲ್ಲಾ ರೀತ್ಯಾ ಭತ್ಯೆಗಳನ್ನು ವಸೂಲಿ ಮಾಡಿ ಹಿಂದಿನ ಆಡಳಿತಮಂಡಳಿಯ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದೆ. ಅದರಂತೆ ಸಂಘವು 2015–20ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಆಡಳಿತಮಂಡಳಿ ಸದಸ್ಯರಿಂದ ಹಣ ವಸೂಲಿಗೆ ಕಲಂ 70ರಡಿ ಇಲಾಖೆಯಲ್ಲಿ ದಾವಾ ಸಂಖ್ಯೆ:ಅನಿ(ವ&ಇ)/ಡಿ2/ಎಂಡಿ/93/2024–25 ದಾಖಲಿಸಿದ್ದು, ಸದರಿ ವ್ಯಾಜ್ಯವು ವಿಚಾರಣಾ ಹಂತದಲ್ಲಿರುತ್ತದೆ.

ಆರೋಪ ಸಂಖ್ಯೆ–7ರ ಇಲಾಖಾ ನಿರ್ದೇಶನ

ಆರೋಪಿತ ನೌಕರರಾದ ಶ್ರೀ ಜಗದೀಶ್ ಮತ್ತು ಶ್ರೀ ಕೆ. ರಾಜೇಂದ್ರ ಇವರುಗಳಿಂದ ದುರುಪಯೋಗವಾಗಿರುವ ಹಣ ವಸೂಲಾತಿಗೆ ಕ್ರಮವಹಿಸಲು ಸೂಚಿಸಿದೆ. ಅದರಂತೆ ಸಂಘವು ಕ್ರಮವಹಿಸಿದ್ದು, ಇವರೀರ್ವರನ್ನು ಸೇವೆಯಿಂದ ವಜಾಗೊಳಿಸಲಾಗಿದೆಯಲ್ಲದೆ ಇವರುಗಳ ವಿರುದ್ಧ ಹಣದುರುಪಯೋಗದ ಪ್ರಕರಣದಲ್ಲಿ ಉದಯಗಿರಿ ಪೋಲೀಸ್ ಠಾಣೆಯಲ್ಲಿ ದಾಖಲಿಸಿರುವ ಕ್ರಿಮಿನಲ್ ಮೊಕದ್ದಮೆ ವಿಚಾರಣೆ ಪ್ರಗತಿಯಲ್ಲಿದೆ. ಇದಲ್ಲದೆ ಇವರೀರ್ವರಿಂದ ದುರುಪಯೋಗವಾಗಿರುವ 55,71,235 /– ರೂ ಹಣ ವಸೂಲಿಗೆ ಕಲಂ 70ರಡಿ ಇಲಾಖೆಯಲ್ಲಿ ದಾವಾ ಸಂಖ್ಯೆ: ಅನಿ(ವ&ಇ)/ಡಿ2/ಎಂಡಿ/94/2024–25 ದಾಖಲಿಸಿದ್ದು, ಸದರಿ ವ್ಯಾಜ್ಯವು ವಿಚಾರಣಾ ಹಂತದಲ್ಲಿರುತ್ತದೆ.

ಆರೋಪ ಸಂಖ್ಯೆ-8ರ ಇಲಾಖಾ ನಿರ್ದೇಶನ

ಅರಣ್ಯ ಇಲಾಖೆ ಅನುಮತಿ ಇಲ್ಲದೆ ಸಂಘದ ಅಂದಿನ ಉಪಾಧ್ಯಕ್ಷರಾದ ಶ್ರೀ ಎಂ. ಗಂಗಾಧರ್‌ರವರು ಬಡಾವಣೆಗಳಲ್ಲಿನ ಮರಗಳನ್ನು ಕಡಿದು ಹಾಕಿದ್ದು, ಅವರ ಅಧಿಕಾರ ವ್ಯಾಪ್ತಿಯನ್ನು ಮೀರಿ ಕಾರ್ಯನಿರ್ವಹಿಸಿರುವುದು ಸಾಬೀತಾಗಿರುತ್ತದೆ. ಸದರಿ ದಂಡದ ಮೊತ್ತ ರೂ 2,42,000 ಗಳನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ಎಂ. ಗಂಗಾಧರ್ ಇವರು ಪಾವತಿಸಬೇಕಾಗಿರುತ್ತದೆ. ಆದರೆ ದಿನಾಂಕ 29.9.2019ರ ಆಡಳಿತಮಂಡಳಿಯು ಸಭೆಯಲ್ಲಿ ಈ ಮೇಲಿನ ಮೊತ್ತವನ್ನು ಪಾವತಿಸಲು ತೀರ್ಮಾನಿಸಿರುವುದರಿಂದ ಅಂದಿನ ಆಡಳಿತ ಮಂಡಳಿ ಸದಸ್ಯರುಗಳಿಂದ ಕಾಯ್ದೆ ಕಲಂ 68ರ ನಿರ್ದೇಶನದಂತೆ ವಸೂಲಾತಿಗೆ ಅಗತ್ಯ ಕ್ರಮ ಕೈಗೊಳ್ಳಲು ಮತ್ತೊಮ್ಮೆ ಸೂಚಿಸಿದೆ. ಹಣ ವಸೂಲಿಗೆ ಕಲಂ 70ರಡಿ ಇಲಾಖೆಯಲ್ಲಿ ದಾವಾ ಸಂಖ್ಯೆ: ಅನಿ(ವ&ಇ)/ಡಿ2/ಎಂಡಿ/92/2024-25 ದಾಖಲಿಸಿದ್ದು, ಸದರಿ ವ್ಯಾಜ್ಯವು ವಿಚಾರಣಾ ಹಂತದಲ್ಲಿರುತ್ತದೆ.

(ii) 2010-15 ಮತ್ತು 2020-25ರ ಅವಧಿಯ ಅವ್ಯವಹಾರಗಳ ಕುರಿತು-ನಿಬಂಧಕರು, ಸಹಕಾರ ಇಲಾಖೆ (ವಸತಿ ಮತ್ತು ಇತರೆ) ಇವರು ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64 ರಡಿ ಜರುಗಿದ ವಿಚಾರಣಾ ವರದಿಯ ಮೇಲೆ ಕಲಂ 68ರ ಆದೇಶ ಹೊರಡಿಸಿರುವ ಕುರಿತು

2010-15 ಮತ್ತು 2020-25ರ ಅವಧಿಯ ಅವ್ಯವಹಾರಗಳ ಕುರಿತು 7 ಆರೋಪಗಳನ್ನು ಪಟ್ಟಿ ಮಾಡಿ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64ರ ರೀತ್ಯಾ ವಿಚಾರಣೆ ನಡೆಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪ ವಿಭಾಗ, ಮೈಸೂರು ಇವರನ್ನು ನೇಮಕ ಮಾಡಲಾಗಿತ್ತು. ಅದರಂತೆ ವಿಚಾರಣಾಧಿಕಾರಿಗಳು 2010-15 ಮತ್ತು 2020-25ರ ಅವಧಿಯಲ್ಲಿ ಆಗಿರುವ ಕರ್ತವ್ಯಲೋಪಗಳು ಹಾಗೂ ಹಣಕಾಸು ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಹಕಾರ ಸಂಘಗಳ ಅಪರ ನಿಬಂಧಕರಿಗೆ ಸಲ್ಲಿಸಿರುತ್ತಾರೆ.

ಅಪರ ನಿಬಂಧಕರು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64ರ ವಿಚಾರಣಾ ವರದಿ ಆದರಿಸಿ ದಿನಾಂಕ 28.08.2023ರ ಪತ್ರದಲ್ಲಿ ಕಲಂ 68ರಡಿ ನಿರ್ದೇಶನ ನೀಡಿರುತ್ತದೆ. ಅದರಂತೆ ಸಂಘವು ಕಲಂ 68ರಡಿ ನಿರ್ದೇಶನದನ್ವಯ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಪರ ನಿಬಂಧಕರು, ಸಹಕಾರ ಇಲಾಖೆ (ವಸತಿ ಮತ್ತು ಇತರೆ) ಇವರಿಗೆ ಸಂಘವು ಆಗಿಂದ್ದಾಗ್ಗೆ ವರದಿ ಸಲ್ಲಿಸುತ್ತಿದೆ. ಸಂಘವು ಸಲ್ಲಿಸುತ್ತಿದ್ದ ಅನುಪಾಲನಾ ವರದಿಯನ್ನು ಇಲಾಖೆಯು ವಿಮರ್ಶಿಸಿ ನೀಡಿರುವ ನಿರ್ದೇಶನದಂತೆ ಅಂತಿಮವಾಗಿ ಆರೋಪ ಸಂಖ್ಯೆ 1, 3, 5 ಈ ಆರೋಪಗಳನ್ನು ಕೈಬಿಡಲಾಗಿದೆ. ಉಳಿದಂತೆ ನಾಲ್ಕು ಆರೋಪಗಳಿಗೆ (ಅರೋಪ ಸಂಖ್ಯೆ 2, 4, 6, 7) ಬಗ್ಗೆ ಮಾತ್ರ ಸಂಘವು ಕ್ರಮವಹಿಸಬೇಕಾಗಿದ್ದು, ವಿವರ ಕೆಳಕಂಡಂತಿದೆ.

ಆರೋಪ ಸಂಖ್ಯೆ–2ರ ಇಲಾಖಾ ನಿರ್ದೇಶನ

ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಎರಡನೇ ಹಂತದ 137 ಮೂಲೆ ನಿವೇಶನಗಳನ್ನು ರೂ.700/– ಗಳಿಂದ 3000/– ಗಳಿಗೆ ಹರಾಜು ಮಾಡಿ ರೂ.220/– ರಂತೆ ನೋಂದಣಿ ಮಾಡಿಕೊಟ್ಟಿರುವ ಆರೋಪಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಅನುಪಾಲನಾ ಸಲ್ಲಿಸಿರುವುದಿಲ್ಲ. ಆದ ಕಾರಣ ನಿಮ್ಮ ಅನುಪಾಲನೆಯನ್ನು ತಿರಸ್ಕರಿಸಿದೆ. ವಿಚಾರಣಾಧಿಕಾರಿಗಳು ಅಭಿಪ್ರಾಯಿಸಿರುವಂತೆ 2ನೇ ಹಂತದ ವಿವಿಧ ಅಳತೆಯ 136 ಮೂಲೆ ನಿವೇಶನಗಳನ್ನು ಹರಾಜು ಪ್ರಕ್ರಿಯೆ ಮೂಲಕ ಸದಸ್ಯರಿಗೆ ಹಂಚಿಕೆ ಮಾಡಿದ್ದು, ಇದರ ಒಟ್ಟು ಮೊತ್ತ ರೂ 31,00,23,615/– ಗಳಾಗಿದ್ದು, ಈ ಒಟ್ಟು ಮೊತ್ತಕ್ಕೆ ನೋಂದಣಿ ಶುಲ್ಕವನ್ನು ನಿಗದಿಪಡಿಸದೇ ಸರ್ಕಾರದ ಮಾರ್ಗಸೂಚಿ ದರದನ್ವಯ ನೋಂದಣಿ ಮಾಡಿಕೊಡಲು ತೀರ್ಮಾನಿಸಿರುವ ಅಂದಿನ ಆಡಳಿತ ಮಂಡಳಿಯ ನಿರ್ಣಯವು ನಿಯಮ ಬಾಹಿರವಾಗಿದ್ದು, ಸರ್ಕಾರಕ್ಕೆ ನಷ್ಟ ಉಂಟಾಗಿರುವುದು ಸಾಬೀತಾಗಿರುತ್ತದೆ ಎಂದು ತಿಳಿಸಿ ಈ ರೀತಿ ಆಡಳಿತ ಮಂಡಳಿಯ ನಿಯಮಬಾಹಿರ ನಿರ್ಣಯದಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು 136 ಸದಸ್ಯರ ಸಂಬಂಧದ ನೋಂದಣಿ ಪತ್ರಗಳನ್ನು ಪರಿಶೀಲಿಸಿ, ನಿವೇಶನಗಳ ಸಂಬಂಧ ಸದಸ್ಯರಿಂದ ಪಡೆದಿರುವ ಮೊತ್ತಕ್ಕನುಗುಣವಾಗಿ ನೋಂದಣಿ ಶುಲ್ಕವನ್ನು ಲೆಕ್ಕ ಹಾಕಿ ವಿಚಾರಣಾಧಿಕಾರಿಗಳ ಅಭಿಪ್ರಾಯದಂತೆ ಸಂಬಂಧಪಟ್ಟ ಫಲಾನುಭವಿ ಸದಸ್ಯರಿಂದ ವಸೂಲಿ ಮಾಡಿ ಸರ್ಕಾರದ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ, ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ದಿನಾಂಕ: 07.04.2012 ರಂದು ನಿಯಮ ಬಾಹಿರ ನಿರ್ಣಯ ಕೈಗೊಂಡ ಅಂದಿನ ಆಡಳಿತ ಮಂಡಳಿಯ ಸದಸ್ಯರಿಂದ ಜಂಟಿಯಾಗಿ ಮತ್ತು ಬಿಡಿ ಬಿಡಿಯಾಗಿ ವಸೂಲಿ ಮಾಡಿ ಸರ್ಕಾರಕ್ಕೆ ಪಾವತಿಸಲು ಸೂಚಿಸಿದೆ.

ದಿನಾಂಕ: 17.01.2025 ರ ಪತ್ರದಲ್ಲಿ ಉಪನೋಂದಣಾಧಿಕಾರಿಗಳು ಮೈಸೂರು ಪಶ್ಚಿಮ ರವರು ಸಂಘಕ್ಕೆ ನೋಂದಣಿ ಐಚ್ಛಿಕ/ನೋಂದಣಿಯೇತರ ದಸ್ತಾವೇಜುಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 67ಬಿ ಅನ್ವಯ ನಿಗಧಿತ ಮುದ್ರಾಂಕ ಶುಲ್ಕ ಪಾವತಿಯಾಗಿರುವ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸುವ ಕುರಿತು ದಿನಾಂಕ: 15.01.2025ರಂದು ಸಂಘದ ಕಛೇರಿಗೆ ಭೇಟಿ ನೀಡುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿಯವರು ಇದುವರೆವಿಗೂ ಪರಿಶೀಲನೆಗೆ ಸಂಘದ ಕಛೇರಿಗೆ ಭೇಟಿ ನೀಡಿರುವುದಿಲ್ಲ. ಸದರಿಯವರು ಕಛೇರಿಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿ ವರದಿ ನೀಡಿದ ನಂತರ ಸಂಘವು ಕ್ರಮ ಕೈಗೊಳ್ಳುವುದು.

ಆರೋಪ ಸಂಖ್ಯೆ–4ರ ಇಲಾಖಾ ನಿರ್ದೇಶನ

2011 ರಿಂದ 2015ರ ಅವಧಿಯಲ್ಲಿ ರೂ. 106.00 ಕೋಟಿಗೂ ಅಧಿಕ ಮೊತ್ತವನ್ನು ಭೂ ಅಭಿವೃದ್ಧಿದಾರರಿಗೆ ಪಾವತಿಸಿದ್ದಾಗ್ಯೂ ಇದುವರೆವಿಗೂ ಭೂ ಅಭಿವೃದ್ಧಿದಾರರಿಂದ ನಿವೇಶನಗಳನ್ನು

ಪಡೆಯಲು 2011 ರಿಂದ ಪ್ರಸ್ತುತ ಅವಧಿಯವರೆಗಿನ ಎಲ್ಲಾ ಆಡಳಿತಮಂಡಳಿಗಳು ವಿಫಲವಾಗಿವೆ ಎಂದು ಪರಿಗಣಿಸಲಾಗಿದೆ. ಮುಂದುವರೆದು ಭೂ ಅಭಿವೃದ್ಧಿದಾರರಿಂದ ನಿವೇಶನ ಪಡೆಯಲು ವಿಫಲರಾಗಿರುವ ಆಡಳಿತಮಂಡಳಿಯ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ.

ಆರೋಪ ಸಂಖ್ಯೆ–6ರ ಇಲಾಖಾ ನಿರ್ದೇಶನ

ಬಡಾವಣೆವಾರು ಲೆಕ್ಕಗಳನ್ನು ನಿರ್ವಹಿಸಿ 2024–25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಅಳವಡಿಸಿಕೊಂಡ ನಂತರ ಕ್ರಮದ ಬಗ್ಗೆ ಅನುಪಾಲನೆಯನ್ನು ಸಲ್ಲಿಸಲು ಸೂಚಿಸಿದೆ.

ನೀವು ಸಲ್ಲಿಸಿರುವ 3 ಮತ್ತು 4ನೇ ಹಂತದ ಬಡಾವಣೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಖರ್ಚು–ವೆಚ್ಚ ತಃಖ್ತೆಗಳನ್ನು ಪರಿಶೀಲಿಸಲಾಗಿ, ನಿವೇಶನ ಠೇವಣಿದಾರರಿಂದ ಸಂಗ್ರಹಿಸಿರುವ ಮೊತ್ತಕ್ಕಿಂತ ಬಡಾವಣೆ ವೆಚ್ಚವು ಅಧಿಕವಾಗಿರುವುದನ್ನು ಗಮನಿಸಿದೆ. ಹೆಚ್ಚುವರಿ ವೆಚ್ಚಗಳನ್ನು ಯಾವ ಮೂಲಗಳಿಂದ ಭರಿಸಲಾಗಿದೆ ಎಂಬ ವಿವರಗಳಿರುವುದಿಲ್ಲ. ಸಲ್ಲಿಸಲು ಸೂಚಿಸಿದೆ ಹಾಗೂ ಬಡಾವಣೆ ಸಂಬಂಧ ಸಂಗ್ರಹಣೆಯಾಗುವ ಮೊತ್ತಕ್ಕನುಗುಣವಾಗಿ ಬಡಾವಣೆ ಅಭಿವೃದ್ಧಿ ವೆಚ್ಚ ಮಿತಿಯಲ್ಲಿರುವಂತೆ ಆಡಳಿತ ಮಂಡಳಿಯು ಎಚ್ಚರಿಕೆ ವಹಿಸಲು ಹಾಗೂ ಈ ಬಗ್ಗೆ ಕಾಯ್ದೆ ಮತ್ತು ನಿಯಮಗಳಿಗನುಗುಣವಾಗಿ ಸೂಕ್ತ ಕ್ರಮವಹಿಸಲು ಸೂಚಿಸಿದೆ. ಈ ನಿರ್ದೇಶನದಂತೆ ಸಂಘವು ಕ್ರಮವಹಿಸಿದೆ.

ಹೆಚ್ಚುವರಿ ಆರೋಪ ಸಂಖ್ಯೆ–7ರ ಇಲಾಖಾ ನಿರ್ದೇಶನ

5ನೇ ಹಂತದ ಬಡಾವಣೆ ರಚನೆಗೆ ಕಾನೂನು ಸಲಹೆ ಪಡೆಯದೆ ಅಂದಾಜುಗಳನ್ನು ತಯಾರಿಸದೇ ಭೂಮಿಯ ಪೂರ್ವಾಚರಗಳನ್ನು ಪರಿಶೀಲಿಸಿ ಸಲ್ಲಿಸದೇ ಹಾಗೂ ಆಡಳಿತ ಮಂಡಳಿಯ ಗಮನಕ್ಕೆ ತರದೇ ಸಂಘದ ಅಂದಿನ ಅಧ್ಯಕ್ಷರಾದ ಶ್ರೀ ಎಸ್. ಪುಟ್ಟರಾಜಪ್ಪ ಮತ್ತು ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಸರ್ವಭೂಷಣ್ ಮತ್ತು ಸಂಘದ ಕಾರ್ಯದರ್ಶಿಯಾಗಿದ್ದ ಶ್ರೀ ಮನುಕುಮಾರ್ ಇವರು ಕಾನೂನು ಬಾಹಿರವಾಗಿ ಮೆ॥ ವಾಸ್ತವ ಡೆವಲಪರ್ಸ್ ರವರಿಗೆ ರೂ 3.75 ಕೋಟಿಗಳನ್ನು ಕಾನೂನುಬಾಹಿರವಾಗಿ ಪಾವತಿಸಿರುವುದು ವಿಚಾರಣಾ ವರದಿಯಿಂದ ಸಾಬೀತಾಗಿರುತ್ತದೆ.

ಸಂಘದ ಅಂದಿನ ಅಧ್ಯಕ್ಷರಾದ ಶ್ರೀ ಎಸ್. ಪುಟ್ಟರಾಜಪ್ಪ ಮತ್ತು ಉಪಾಧ್ಯಕ್ಷರಾಗಿದ್ದ ಶ್ರೀ ಎಂ.ಎಸ್. ಸರ್ವಭೂಷಣ್ ಹಾಗೂ ಕಾರ್ಯದರ್ಶಿಯಾಗಿದ್ದ ಶ್ರೀ ಮನುಕುಮಾರ್ ಇವರು ರೂ. 3.75 ಕೋಟಿಗಳನ್ನು ಕಾನೂನು ಬಾಹಿರವಾಗಿ ಮೆ॥ ವಾಸ್ತವ ಡೆವಲಪರ್ಸ್‌ಗೆ ಪಾವತಿಸಿರುವುದು ಸಾಬೀತಾಗಿರುವುದರಿಂದ ಹಾಗೂ ಸದರಿ ಬಡ್ಡಿ ಮೊತ್ತವು ಇದುವರೆಗೆ ಮೆ॥ ವಾಸ್ತವ ಡೆವಲಪರ್ಸ್‌ರವರಿಂದ ವಸೂಲಾಗದೇ ಇರುವುದರಿಂದ ಪಾವತಿ ದಿನಾಂಕದಿಂದ ಶೇ 18ರ ದರದಲ್ಲಿ ಬಡ್ಡಿಯನ್ನು ಸದರಿಯವರುಗಳಿಂದ ಜಂಟಿಯಾಗಿ ಹಾಗೂ ಬಿಡಿ ಬಿಡಿಯಾಗಿ ವಸೂಲಾತಿ ಮಾಡಿಕೊಳ್ಳಲು ಸೂಚಿಸಿದೆ.

16. ಕಾರ್ಯನಿರ್ವಹಣೆಯಲ್ಲಿ ಕೊರತೆಯೇನಾದರೂ ಇದ್ದರೆ ಅವುಗಳನ್ನು ಪರಿಶೀಲಿಸುವುದು ಹಾಗೂ ಅವುಗಳನ್ನು ಸರಿಪಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವುದು.

2020–21ನೇ ಸಾಲಿನಲ್ಲಿ ಸಂಘವು ಲಾಭಾಂಶ ಹೊಂದಿದ್ದರೂ 2021–22 ಮತ್ತು 2022–23 ವರ್ಷಗಳ ನಷ್ಟಕ್ಕೆ ಹೊಂದಾಣಿಕೆ ಮಾಡಿಕೊಂಡ ನಂತರವೂ 2023–24ನೇ ಸಾಲಿನ ಅಂತ್ಯಕ್ಕೆ ನಿವ್ವಳ ನಷ್ಟ 63.08 ಲಕ್ಷ ರೂಗಳಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸಂಘವು ರೂ 86,57,916/– ಲಾಭಾಂಶ ಹೊಂದಿರುತ್ತದೆ.

17. ಸಂಘದ ಕಾರ್ಯಚಟುವಟಿಕೆಗಳು /ಮುಂದಿನ ಯೋಜನೆಗಳು

ಸಂಘವು ಈಗ ಅಭಿವೃದ್ಧಿಪಡಿಸುತ್ತಿರುವ ಮೂರು ಮತ್ತು ನಾಲ್ಕನೇ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಿ, ಸದಸ್ಯರುಗಳಿಗೆ ನಿವೇಶನಗಳ ವಿತರಣೆಗೆ ಕ್ರಮವಹಿಸುವುದು.

18. 2024–25ನೇ ಸಾಲಿನಲ್ಲಿ ಜರುಗಿರುವ ಆಡಳಿತಮಂಡಳಿ ಸಭೆಗಳ ವಿವರ/ಹಾಜರಾತಿ/ ನಿರ್ದೇಶಕರುಗಳಿಗೆ ಪಾವತಿಸಿರುವ Sitting Fee ವಿವರ ಕೆಳಕಂಡಂತಿದೆ.

ಕ್ರ. ಸಂ	ಹೆಸರು	ಜರುಗಿರುವ ಸಭೆಗಳ ಸಂಖ್ಯೆ	ಭಾಗವಹಿಸಿದ ಸಭೆಗಳ ಸಂಖ್ಯೆ	ಭಾಗವಹಿಸಲು ಸಾಧ್ಯವಾಗದ ಸಭೆಗಳ ಸಂಖ್ಯೆ	ಸಂಭಾವನೆ ವಿವರ
1	ಶ್ರೀ ಎಂ.ಎಸ್. ಸರ್ವಭೂಷಣ್	13	13	–	–
2	ಶ್ರೀ ಮಹೇಶ್ ಡಿ.ಎಸ್.	13	09	04	9000
3	ಪ್ರೊ ಜಿ.ಸಿ. ರಾಜಣ್ಣ	13	12	01	12000
4	ಶ್ರೀ ಕೆ.ಗಂಗಾಧರಪ್ಪ	13	12	01	12000
5	ಶ್ರೀ ನಂಜುಂಡಸ್ವಾಮಿ ಆರ್.ಎಸ್.	13	06	07	–
6	ಶ್ರೀ ಎಸ್. ನಂದೀಶ್	13	13	–	13000
7	ಪ್ರೊ ನಾಗೇಂದ್ರ ಕುಮಾರ್ ಹೆಚ್.ಎಸ್.	13	11	02	11000
8	ಪ್ರೊ ಶಿವಣ್ಣ ಸಿ.ಎಚ್.	13	09	04	9000
9	ಶ್ರೀ ನಂಜುಂಡಸ್ವಾಮಿ ಎಸ್.	13	13	–	13000
10	ಶ್ರೀಮತಿ ಮಂಜುಳ ಎಸ್.	13	13	–	13000
11	ಶ್ರೀಮತಿ ವಾಣಿ.ವಿ	13	13	–	13000
12	ಡಾ ಪ್ರಭು ಎಂ.	13	09	04	9000
13	ಶ್ರೀ ನಟರಾಜು ಕೆ.ಎಂ.	13	10	03	10000

19. ಸಂಘದ ಹಣಕಾಸು ನಿರ್ವಹಣೆ :

2024–25ನೇ ಸಾಲಿನಲ್ಲಿ ಈ ಕೆಳಕಂಡ ಷೆಡ್ಯೂಲ್ ಬ್ಯಾಂಕುಗಳಲ್ಲಿ ಸಂಘದ ಹಣಕಾಸು ವ್ಯವಹಾರ ನಿರ್ವಹಿಸಲಾಗಿರುತ್ತದೆ. 31.03.2025ರ ನಗದು ಶಿಲ್ಕು ವಿವರಗಳನ್ನು ಅವುಗಳ ಮುಂದೆ ನಮೂದಿಸಲಾಗಿದೆ.

ಕೆನರಾ ಬ್ಯಾಂಕ್ ಚಾಲ್ತಿ ಖಾತೆ	:	64,63,603.60
ಎಸ್ ಬಿ ಐ ಚಾಲ್ತಿ ಖಾತೆ (6446)	:	4,03,617.53
ಕರ್ನಾಟಕ ಗ್ರಾಮೀಣ ಬ್ಯಾಂಕ್ ಚಾಲ್ತಿ ಖಾತೆ	:	2,98,762.77
ಎಂ ಸಿ ಡಿ ಸಿ ಸಿ ಬ್ಯಾಂಕ್ ಚಾಲ್ತಿ ಖಾತೆ	:	1,29,669.00
ಕರ್ನಾಟಕ ಬ್ಯಾಂಕ್ ಚಾಲ್ತಿ ಖಾತೆ (6801)	:	20,69,455.38
ಕರ್ನಾಟಕ ಬ್ಯಾಂಕ್ ಚಾಲ್ತಿ ಖಾತೆ (6701)	:	19,218.00
ಎಸ್ ಬಿ ಐ ಉಳಿತಾಯ ಖಾತೆ ಹಿಂದಿನ ಸಾಲಿನಂತೆ	:	29,83,400.00
ಎಸ್ ಬಿ ಐ ಉಳಿತಾಯ ಖಾತೆ ಅಮಾನತ್ತು 2013–14ನೇ ಸಾಲಿನದ್ದು	:	21,27,545.00

20. ವಿವಿಧ ನ್ಯಾಯಾಲಯಗಳಲ್ಲಿರುವ ವ್ಯಾಜ್ಯಗಳ ವಿವರ :

a) ಜೆಎಸ್‌ಎಸ್ ಮೊದಲನೇ ಹಂತ

ಕ್ರ.ಸಂ	ಗ್ರಾಮ	ಸರ್ವೆ ನಂ.	ಎ.ಗುಂ	ವ್ಯಾಜ್ಯ ಸಂಖ್ಯೆ	ನ್ಯಾಯಾಲಯದ ಹೆಸರು
1	ಕ್ಯಾತಮಾರನಹಳ್ಳಿ	170	2ಎ 5ಗುಂ	RSA 1129/08	ಉಚ್ಚ ನ್ಯಾಯಾಲಯ

ಜೆಎಸ್‌ಎಸ್ ಮೊದಲನೇ ಹಂತದ ಬಡಾವಣೆಯಲ್ಲಿ ಹಿಂದಿನ ಭೂ ಮಾಲೀಕರುಗಳಾದ ಶ್ರೀ ಎಲ್.ತಮ್ಮಯ್ಯ ಹಾಗೂ ಇವರ ಸಹೋದರರು ಕ್ಯಾತಮಾರನಹಳ್ಳಿ ಗ್ರಾಮದ ಸರ್ವೆ ನಂ.170ರ 2 ಎಕರೆ 5 ಗುಂಟೆ ಜಮೀನಿನ ಭೂ ಸ್ವಾಧೀನದ ವಿಷಯದ ಬಗ್ಗೆ ಮೂರನೇ ಅಪರ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ)ದಲ್ಲಿ ಹೂಡಿದ್ದ ವ್ಯಾಜ್ಯದಲ್ಲಿ ಸಂಘದ ವಿರುದ್ಧ ತೀರ್ಪು ಬಂದಿದ್ದು ಸದರಿ ಆದೇಶಕ್ಕೆ ಸಂಘವು ರಾಜ್ಯ ಉಚ್ಚನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿ ತಡೆಯಾಜ್ಞೆಯನ್ನು ತಂದಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಈ ವ್ಯಾಜ್ಯವು List ಆಗಿರುತ್ತದೆ ಎಂದು ಸಂಘದ ವಕೀಲರು ತಿಳಿಸಿರುತ್ತಾರೆ

ಕ್ರ.ಸಂ	ಗ್ರಾಮ	ಸರ್ವೆ ನಂ.	ಎ.ಗುಂ	ವ್ಯಾಜ್ಯ ಸಂಖ್ಯೆ	ನ್ಯಾಯಾಲಯದ ಹೆಸರು
2	ಕ್ಯಾತಮಾರನಹಳ್ಳಿ	163	10 ಗುಂ ಹಾಗೂ 40*60 ನಿವೇಶನ	OS 57 / 2017	3rd ASCJ

ಹಿಂದಿನ ಭೂಮಾಲೀಕರುಗಳಾದ ಶ್ರೀ ದೇವಕುಮಾರ್ ಎಂಬುವವರು ಅವರ ತಂದೆ ಶ್ರೀ ಚಂದ್ರಪ್ಪರವರಿಗೆ ನೀಡಿರುವ ಭೂ ಪರಿಹಾರದ ನಿವೇಶನ ಹಾಗೂ ಸರ್ವೆ ನಂ.163 ರಲ್ಲಿನ 10ಗುಂಟೆ ಜಮೀನಿನಲ್ಲಿ ತಮಗೂ ಭಾಗ ಬರಬೇಕೆಂದು ಹೂಡಿದ್ದ ವ್ಯಾಜ್ಯವು ದಿನಾಂಕ: 28.01.2025ರಂದು ವಜಾಗೊಂಡಿರುತ್ತದೆ.

b) ಸುಪ್ರೀಂ ಕೋರ್ಟ್ ಹಿಂದಿನ ತೀರ್ಪಿನ ಕಾರಣ ಹೆಣ್ಣು ಮಕ್ಕಳು ಹಾಗೂ ಸಂಬಂಧಿಕರು ತಮಗೂ ಭಾಗ ಬರಬೇಕೆಂದು ವಿವಿಧ ನ್ಯಾಯಾಲಯಗಳಲ್ಲಿ ವ್ಯಾಜ್ಯ ಹೂಡಿದ್ದು, ಸಂಘವು ಕಾನೂನು ಪ್ರಕಾರ ವಕೀಲರ ಮೂಲಕ ವ್ಯವಹರಿಸುತ್ತಿದೆ.

(i) ಜೆಎಸ್ಎಸ್ ಎರಡನೇ ಹಂತ :

ಕ್ರ.ಸಂ	ಗ್ರಾಮ	ಸರ್ವೆ ನಂ.	ಎ.ಗುಂ	ವ್ಯಾಜ್ಯ ಸಂಖ್ಯೆ	ನ್ಯಾಯಾಲಯದ ಹೆಸರು
	ಭಾಗ್ಯ V/s ಚನ್ನನಾಯಕ				
1	ಯಾಂದಹಳ್ಳಿ	125	2ಎ 23ಗುಂ	OS639/13	6th ASCJ
	ಮಾಯಣ್ಣ V/s ಹೊನ್ನಮ್ಮ				
2	ಯಾಂದಹಳ್ಳಿ	125	2ಎ 23ಗುಂ	OS887/16	6th ASCJ
	ನಾಗರತ್ನ V/s ಮಹಾದೇವಪ್ಪ				
3	ಲಲಿತಾದ್ರಿಪುರ	63	2ಎ 07ಗುಂ	OS146/16	3rd ASCJ
	ಜೆಎಸ್ಎಸ್ಎಂವಿಪಿ ಇಹೆಚ್‌ಬಿಸಿಎಸ್ V/s ದೇವಮ್ಮ				
4	ಲಲಿತಾದ್ರಿಪುರ	58	1ಎ 37ಗುಂ	RSA 1953/13	High court of Karnataka (Case Disposed)
ರಾಜ್ಯ ಉಚ್ಛ ನ್ಯಾಯಾಲಯವು ದಿನಾಂಕ : 01.07.2025ರಂದು ಸಂಘದ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ. ಈ ಆದೇಶವನ್ನು ಪ್ರಶ್ನಿಸಿ ಸಂಘವು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಿಸಲು ಕ್ರಮ ವಹಿಸಿದೆ.					
ಸ್ವಾಮಿ V/s ವೆಂಕಟಪ್ಪ					
5	ಲಲಿತಾದ್ರಿಪುರ	62	1ಎ 35ಗುಂ	OS 1907/12	13th AFM
	ಬಸವಣ್ಣ V/s ಲಕ್ಷ್ಮಣ				
6	ಕುಪ್ಪಲೂರು	33/1	1ಎ 1½ಗುಂ	RA/156/22	7th AD&SJ
	ಮಂಜುಳ V/s ಲಕ್ಷ್ಮಣ				
7	ಕುಪ್ಪಲೂರು	33/1	1ಎ 1½ಗುಂ	O.S.551/22	7th ASCJ
	ಗೌರಮ್ಮ V/s ಟಿ. ಚೆಲುವರಾಜು				
8	ಯಾಂದಹಳ್ಳಿ	127 /1	0ಎ 34ಗುಂ	O.S. 141/20	3rd ASCJ

(ii) ಜೆಎಸ್‌ಎಸ್ ಮೂರನೇ ಹಂತ:

ಕ್ರ.ಸಂ	ಗ್ರಾಮ	ಸರ್ವೆ ನಂ.	ಎ.ಗುಂ.	ವ್ಯಾಜ್ಯ ಸಂಖ್ಯೆ	ನ್ಯಾಯಾಲಯದ ಹೆಸರು
ಶ್ರೀಮತಿ ರತ್ನಮ್ಮ V/s ಜೆಎಸ್‌ಎಸ್ ಎಂವಿಪಿ ಇಹೆಚ್‌ಬಿಸಿಎಸ್					
1	ವರುಣಾ	138	30ಗುಂ	RSA-1585/2024	ರಾಜ್ಯ ಉಚ್ಚನ್ಯಾಯಾಲಯ
ರಂಜಿತ V/s ಮಹಾದೇವಯ್ಯ					
2	ವರುಣಾ	126	2ಎ 01ಗುಂ	OS 711/16	6th ASCJ
JSSMVPEHBCS V/s State of Karnataka and other					
3	ವರುಣಾ	212 (old 140)	1ಎ 16ಗುಂ	WP No 12004/ 2024 (SC/ST)	High courts of Karnataka
ಚಿಕ್ಕತಾಯಮ್ಮ V/s ಜಗದೀಶ್					
4	ವರುಣಾ	120/1	2ಎ 30ಗುಂ	OS1136/21	6th ASCJ
ಚಿನ್ನಮ್ಮ V/s ಮಹದೇವಮ್ಮ					
5	ವರುಣಾ	113/4,5	2ಎ 7ಗುಂ	OS80/2023	3rd ASCJ

(c) ಸಂಘದ ಸದಸ್ಯರು / ಸಹ ಸದಸ್ಯರುಗಳು ಹೂಡಿರುವ ವ್ಯಾಜ್ಯಗಳು

(i) ಜಿಲ್ಲಾ ಗ್ರಾಹಕರ ವೇದಿಕೆ ಆದೇಶವನ್ನು ಪ್ರಶ್ನಿಸಿ ರಾಜ್ಯ ಗ್ರಾಹಕರ ವೇದಿಕೆಯಲ್ಲಿ ಹೂಡಿರುವ ವ್ಯಾಜ್ಯಗಳ ವಿವರ ಕೆಳಕಂಡಂತಿದೆ.

ಕ್ರ.ಸಂ	ಸಹ ಸದಸ್ಯರ ಹೆಸರು	ನಿವೇಶನದ ಅಳತೆ
1	ಶ್ರೀಮತಿ ರಾಜಶ್ರೀ ಪಿ.	30*40
2	ಶ್ರೀಮತಿ ಮುಕ್ತಾಂಬ ಎಂ.ಬಿ.	50* 80

(ii) ರಾಜ್ಯ ಗ್ರಾಹಕರ ವೇದಿಕೆ ಆದೇಶವನ್ನು ಪ್ರಶ್ನಿಸಿ ಸಂಘವು ರಾಷ್ಟ್ರೀಯ ಗ್ರಾಹಕರ ವೇದಿಕೆಯಲ್ಲಿ ಹೂಡಿರುವ ವ್ಯಾಜ್ಯಗಳ ವಿವರ ಕೆಳಕಂಡಂತಿದೆ :

ಕ್ರ.ಸಂ	ಸಹ ಸದಸ್ಯರ ಹೆಸರು	ನಿವೇಶನದ ಅಳತೆ
1	ಶ್ರೀಮತಿ ಜಿ. ಜಯಮ್ಮ	50*80
2	ಡಾ ಬಿ.ಎಸ್. ಮಹೇಶ್	50*80
3	ಡಾ ಎಂ.ಎಸ್. ಪ್ರಸಾದ್	50*80
4	ಶ್ರೀಮತಿ ನಂದಿನಿ ಮಹೇಶ್	40*60
5	ಶ್ರೀಮತಿ ಸಿ.ಎನ್. ಮಂಜುಳ	40*60
6	ಶ್ರೀ ಸಿದ್ದರಾಜು	40*60

(iii) ಶ್ರೀ ಸಿದ್ದರಾಜುರವರು ತಮಗೆ 2ನೇ ಹಂತದ ಬಡಾವಣೆಯಲ್ಲಿ 40*60ರ ಅಳತೆಯ ನಿವೇಶನ ಮಂಜೂರು ಮಾಡುವಂತೆ ರಾಜ್ಯ ಗ್ರಾಹಕರ ವೇದಿಕೆಯಲ್ಲಿ ನೀಡಿದ್ದ ಆದೇಶವನ್ನು ಜಾರಿಗೊಳಿಸಲು ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ದಾವಾ ಸಂಖ್ಯೆ EA76/2020ನ್ನು ಹೂಡಿರುತ್ತಾರೆ. ಸಂಘವು ಜಿಲ್ಲಾ ಗ್ರಾಹಕರ ವೇದಿಕೆ ಆದೇಶವನ್ನು ಪ್ರಶ್ನಿಸಿ ರಾಜ್ಯ ಗ್ರಾಹಕರ ವೇದಿಕೆಯಲ್ಲಿ ಮೇಲ್ಮನವಿ (ದಾವಾ ಸಂಖ್ಯೆ A/2063/2023) ದಾಖಲಿಸಿದೆ.

(iv) **ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯದ ದಿನಾಂಕ: 26.06.2020 ಆದೇಶದನ್ವಯ ನಿವೇಶನ ನೋಂದಣಿ ಮಾಡಿಕೊಡುವಂತೆ ಸಂಘದ ವಿರುದ್ಧ ಸದಸ್ಯರು/ಸಹಸದಸ್ಯರುಗಳು ವಿವಿಧ ನ್ಯಾಯಾಲಯಗಳಲ್ಲಿ Execution Petition ದಾಖಲಿಸಿದ್ದಾರೆ.**

Sl.N	Name	Case Number	Court Name
1	Sarojamani M.C.	Ex.189/21	1st ASCJ
2	Umadevi M.R.	Ex.190/21	1st ASCJ
3	Kavana M.	Ex.461/2024	3rd ASCJ
4	Nandini Mahesh	Ex.462/2024	3rd ASCJ
5	Dr. Mahesh B.S.	Ex.463/2024	3rd ASCJ
6	VinayDwarakanath	Ex.468/24	4th ASCJ
7	Nayanathara M.	Ex.469/24	4th ASCJ
8	G. Rathnakara	Ex.470/24	4th ASCJ
9	Nanjundappa	Ex.471/24	5th ASCJ
10	Dr. Prasad M.S.	Ex.472/24	5th ASCJ
11	Anthony Prakash	Ex.473/24	5th ASCJ
12	Sujatha H.R.	Ex.474/24	6th ASCJ
13	Rathnamala N.	Ex.225/24	6th ASCJ
14	Jyotheshwari	Ex.450/24	1st ASCJ
15	Padmavathi S.	Ex.451/24	1st ASCJ
16	B. Vijayakumar	Ex.452/24	1st ASCJ
17	Jayashankar J.	Ex.453/24	2nd ASCJ
18	K.S. Geetha	Ex.454/24	2nd ASCJ
19	Mohana M.M.	Ex.460/24	2nd ASCJ

(v) ಶ್ರೀ ಆನಂದಸಿಂಹರವರು ಜೆಎಸ್ಎಸ್ 2ನೇ ಹಂತದ ಬಡಾವಣೆಯಲ್ಲಿ 30*40 ಅಳತೆಯ ನಿವೇಶನ ನೀಡುವಂತೆ PFM ನ್ಯಾಯಾಲಯದ ವ್ಯಾಜ್ಯ ಸಂಖ್ಯೆ: OS 1489/12ರಲ್ಲಿ ಆಗಿರುವ ಆದೇಶವನ್ನು ಜಾರಿಗೊಳಿಸುವಂತೆ PFM ನ್ಯಾಯಾಲಯದಲ್ಲಿ ವ್ಯಾಜ್ಯ ಸಂಖ್ಯೆ: Ex 93/20ನ್ನು ಹೂಡಿರುತ್ತಾರೆ.

(vi) ಶ್ರೀಮತಿ ಪಿ. ರಾಜಶ್ರೀಯವರು 30*40ರ ಅಳತೆಯ ನಿವೇಶನ ಮಂಜೂರು ಮಾಡಲು ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ದಾವಾ ಸಂಖ್ಯೆ Execution Petition 8/2019ನ್ನು ಹೂಡಿರುತ್ತಾರೆ.

(vii) ಸಂಘದ 2ನೇ ಹಂತದ ಲಲಿತಾದ್ರಿಪುರ/ಯಾಂದಳ್ಳಿ ಬಡಾವಣೆಯಲ್ಲಿನ ಸರ್ವೆ ನಂ 40/3 & 40/2ರ ಹಿಂದಿನ ಭೂಮಾಲೀಕರ ವಾರಸುದಾರರಾದ ಶ್ರೀಮತಿ ಸುಜಾತ ಮತ್ತು ಇತರರು 30*40 ಅಳತೆಯ 2 ನಿವೇಶನ ಮತ್ತು 20*30 ರ1 ನಿವೇಶನ ಮಂಜೂರು ಮಾಡುವಂತೆ ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ದಾವಾ ಸಂಖ್ಯೆ CC51/2024ನ್ನು ಹೂಡಿರುತ್ತಾರೆ. ಸದರಿ ವ್ಯಾಜ್ಯವು ದಿನಾಂಕ: 22.01.2025ರಂದು ವಜಾಗೊಂಡಿರುತ್ತದೆ.

(viii) ಶ್ರೀ ಜಂಬುಕೇಶ್ವರ ಎಸ್.ಎಂ. ಇವರು ಸಂಘದ ಸದಸ್ಯರಾಗಿದ್ದು 3ನೇ ಹಂತದ ಬಡಾವಣೆಯಲ್ಲಿ ನಿವೇಶನ ಕೋರಿ 40*60 ಅಳತೆಗೆ ನಿವೇಶನಕ್ಕೆ ಪಾವತಿಸಿದ್ದ ನಿವೇಶನ ಠೇವಣಿ ಹಣವನ್ನು ಬಡ್ಡಿಸಹಿತ ಹಿಂದಿರುಗಿಸಲು ಆದೇಶಿಸುವಂತೆ ಜಿಲ್ಲಾ ಗ್ರಾಹಕರ ನ್ಯಾಯಾಲಯದಲ್ಲಿ ವ್ಯಾಜ್ಯ (ಸಂಖ್ಯೆ CC220/2020) ಹೂಡಿದ್ದರು. ಜಿಲ್ಲಾ ಗ್ರಾಹಕರ ನ್ಯಾಯಾಲಯವು ಶೇ. 23ರಂತೆ ಬಡ್ಡಿ ಸೇರಿಸಿ ನಿವೇಶನ ಠೇವಣಿ ಹಿಂದುರುಗಿಸಲು ದಿನಾಂಕ: 30.06.2023 ರಂದು ಆದೇಶಿಸಿರುತ್ತದೆ. ಸಂಘವು ಈ ಆದೇಶವನ್ನು ಪ್ರಶ್ನಿಸಿ ರಾಜ್ಯ ಗ್ರಾಹಕರ ವೇದಿಕೆಯಲ್ಲಿ ಮೇಲ್ಮನವಿ (ದಾವಾ ಸಂಖ್ಯೆ : A/323/2024) ದಾಖಲಿಸಿದೆ.

(ix) ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯದಲ್ಲಿ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಎಂ.ಎಸ್ ವಿಶ್ವನಾಥ್‌ರವರು ಸಂಘದ ವಿರುದ್ಧ (ದಾವಾ ಸಂಖ್ಯೆ ಅನಿ(ವ&ಇ)/ ಡಿ2ಎನ್‌ಎಂಡಿ/31/2015–16) ದಿ: 30.12.2015ರಂದು ವ್ಯಾಜ್ಯ ಹೂಡಿರುತ್ತಾರೆ. ಸದರಿ ವ್ಯಾಜ್ಯವು ದಿನಾಂಕ: 20.02.2020ರಂದು ವಜಾಗೊಂಡಿರುತ್ತದೆ.

(x) ಶ್ರೀ ಆರ್. ಚಿದಾನಂದಪ್ಪ ಇವರು ತಮಗೆ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ಮೀಸಲಾತಿಯನ್ವಯ ಜೆಎಸ್‌ಎಸ್ 2ನೇ ಹಂತದ ಬಡಾವಣೆಯಲ್ಲಿ 50*80ರ ಅಳತೆಯ ನಿವೇಶನ ನೀಡಬೇಕೆಂದು ರಾಜ್ಯ ಉಚ್ಛನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದಾರೆ.

(xi) ಜೆಎಸ್‌ಎಸ್ ಮೂರನೇ ಹಂತದ ಬಡಾವಣೆಯ ಡೆವಲಪರ್ಸ್ M/s ಶಾಂಭವಿ ಡೆವಲಪರ್ಸ್‌ರವರ ಚೆಕ್ ಬೌನ್ಸ್ ವಿಷಯಕ್ಕೆ ಸಂಬಂಧಿಸಿದಂತೆ ಸಂಘವು 5th AFM ನ್ಯಾಯಾಲಯದಲ್ಲಿ ದಾವಾ (ಸಂಖ್ಯೆ C.C.2309/21)ನ್ನು ಹೂಡಿರುತ್ತದೆ.

(xii) ಕುಪ್ಪಲೂರು–ಮಂಡಕಳ್ಳಿ ಬಡಾವಣೆಯಲ್ಲಿ ಸಂಘವು ರಚಿಸಿರುವ ಬಡಾವಣೆ ರಸ್ತೆಗೆ M/s ಬಯೋ ಡೈವರ್ಸಿಟಿ ಕನ್ಸರ್ವೇಷನ್ ಇಂಡಿಯಾ ಪ್ರೈ.ಲಿ ರವರು ತಡೆಗೋಡೆ ನಿರ್ಮಿಸಿರುತ್ತಾರೆ. ಈ ತಡೆಗೋಡೆ ತೆರವುಗೊಳಿಸಲು ಸಂಘವು ಕ್ರಮವಹಿಸಿರುತ್ತದೆ. ಇದಕ್ಕೆ ಶ್ರೀ ಭರತ್ ಕುಮಾರ್ ಮತ್ತು ಇತರರು [IVth ACJ] ನ್ಯಾಯಾಲಯದಲ್ಲಿ ವ್ಯಾಜ್ಯ (ಸಂಖ್ಯೆ OS/1656/21) ಹೂಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಸಂಘವು ಉಚ್ಛ ನ್ಯಾಯಾಲಯದಲ್ಲಿ (ವ್ಯಾಜ್ಯ ಸಂಖ್ಯೆ CRP No.622/2023) ದಾಖಲಿಸಿರುತ್ತದೆ.

(xiii) ಶ್ರೀ ದಯಾನಂದ ಸಿ.ಪಿ ಇವರು ಮೊದಲ ಹಂತದ ಬಡಾವಣೆಯ ಸಾತಗಳ್ಳಿ ಸರ್ವೆ ನಂ.57/1ಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ No. 3282/2024ನ್ನು ಹೂಡಿರುತ್ತಾರೆ.

(xiv) ಸಹಕಾರ ಸಂಘಗಳ ಅಪರ ನಿಬಂಧಕರು ಬೆಂಗಳೂರು ರವರ ಕಲಂ 68ರ ನಿರ್ದೇಶನದ ರೀತ್ಯ ಆರೋಪ ಸಂಖ್ಯೆ 06ಕ್ಕೆ ಸಂಬಂಧಿಸಿದಂತೆ ಸಭಾ ಭತ್ಯೆ ವಸೂಲಾತಿಗಾಗಿ ಮತ್ತು ಆರೋಪ ಸಂಖ್ಯೆ–08ಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಗೆ ಪಾವತಿಸಿರುವ ದಂಡಶುಲ್ಕದ ವಸೂಲಾತಿಗಾಗಿ 2015–20ರ

ಅವಧಿಯ ಆಡಳಿತ ಮಂಡಳಿ ವಿರುದ್ಧ ಕಲಂ 70 ರಡಿ ಕ್ರಮವಾಗಿ ದಾವಾ ಸಂಖ್ಯೆ: ಅನಿ(ವ&ಇ)/ಡಿ2/ಎಂಡಿ/93/2024–25 ಮತ್ತು ದಾವಾ ಸಂಖ್ಯೆ: ಅನಿ(ವ&ಇ)/ಡಿ2/ಎಂಡಿ/92/2024–25 ಸಹಕಾರ ಸಂಘಗಳ ಅಪರ ನಿಬಂಧಕರ ಬೆಂಗಳೂರು ಇವರ ನ್ಯಾಯಾಲಯದಲ್ಲಿ ದಾಖಲಿಸಿದೆ.

(xv) ಸಹಕಾರ ಸಂಘಗಳ ಅಪರ ನಿಬಂಧಕರು ಬೆಂಗಳೂರು ರವರ ಕಲಂ 68ರ ನಿರ್ದೇಶನದ ರೀತ್ಯಾ ಆರೋಪ ಸಂಖ್ಯೆ 07ಕ್ಕೆ ಸಂಬಂಧಿಸಿದಂತೆ ಸಂಘದ ನೌಕರರಾಗಿದ್ದ ಶ್ರೀ ಬಿ.ಪಿ. ಜಗದೀಶ್ ಮತ್ತು ಶ್ರೀ ಕೆ. ರಾಜೇಂದ್ರರವರಿಂದ ದುರಪಯೋಗವಾಗಿರುವ ಮೊತ್ತದ ವಸೂಲಾತಿಗಾಗಿ ಸದರಿಯವರುಗಳ ವಿರುದ್ಧ ಕಲಂ 70 ರಡಿ ಸಹಕಾರು ಸಂಘಗಳ ಅಪರ ನಿಬಂಧಕರು ಬೆಂಗಳೂರು ಇವರ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ: ಅನಿ(ವ&ಇ)/ಡಿ2/ಎಂಡಿ/94/2024–25 ದಾಖಲಿಸಿದೆ.

(xvi) ಸಹಕಾರ ಸಂಘಗಳ ಅಪರ ನಿಬಂಧಕರು ಬೆಂಗಳೂರು ಇವರ ನ್ಯಾಯಾಲಯದ ದಿನಾಂಕ 26.06.2020ರ ಆದೇಶ ಮತ್ತು ಕೆ.ಇ.ಟಿ ದಿನಾಂಕ 08.08.2024ರ ಆದೇಶಗಳ ವಿರುದ್ಧ ಸಂಘವು ರಾಜ್ಯ ಉಚ್ಛನ್ಯಾಲಯದಲ್ಲಿ Writ Petition No: 36252/2024, 36249/2024, 36187/2024 353/2025, 34958/2024 ಮತ್ತು 06/2025 ದಾಖಲಿಸಿರುತ್ತದೆ.

(xvii) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹೊರ ವರ್ತುಲ ರಸ್ತೆ ನಿರ್ಮಾಣ ಸಮಯದಲ್ಲಿ ಸಂಘದ ಕುಪ್ಪಲೂರು ಮತ್ತು ಮಂಡಕಳ್ಳಿ ಬಡಾವಣೆಯ ವಿವಿಧ ಸರ್ವೆ ನಂಬರ್‌ಗಳಲ್ಲಿ 5ಎಕರೆ 08ಗುಂಟೆ ವಿಸ್ತೀರ್ಣದ ಜಮೀನನ್ನು ಭೂಸ್ವಾಧಿನ ಪಡಿಸಿಕೊಂಡು 2023ನೇ ಸಾಲಿನಲ್ಲಿ ಪರಿಹಾರವಾಗಿ 50:50 ಅನುಪಾತದಲ್ಲಿ 32 ನಿವೇಶನಗಳನ್ನು ಸಂಘಕ್ಕೆ ಮಂಜೂರು ಮಾಡಿರುತ್ತದೆ. ಈ ಸಂಬಂಧ Office of the Joint Director, Directorate of Enforcement Bangalore Zonal office ರವರಿಂದ Provisional attachment ಆದೇಶವಾಗಿದ್ದು, ಇದನ್ನು ಪ್ರಶ್ನಿಸಿ ಸಂಘವು ರಾಜ್ಯ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಕ್ರಮವಹಿಸಿದೆ.

21. ಅಧ್ಯಕ್ಷರ ಭಾಷಣ

ನಮ್ಮ ಸಂಘಕ್ಕೆ ಸದಾ ಆಶೀರ್ವಾದ ನೀಡುತ್ತಿರುವ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ತಮ್ಮೆಲ್ಲರ ಪರವಾಗಿ ಭಕ್ತಿಪೂರ್ವಕ ಅನಂತ ಪ್ರಣಾಮಗಳನ್ನು ಸಲ್ಲಿಸುತ್ತೇವೆ. ಈ ಸಂಘದ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಮಹಾವಿದ್ಯಾಪೀಠದ ಕಾರ್ಯದರ್ಶಿಗಳು–I ರವರು, ಸಹಕಾರ ಇಲಾಖೆ ಅಧಿಕಾರಿಗಳು, ಸಂಘದ ಡೆವಲಪರ್ಸ್‌ರವರು, ನಿಗದಿತ ಅವಧಿಯಲ್ಲಿ ಸಂಘದ ಲೆಕ್ಕಪತ್ರಗಳನ್ನು ಪರಿಶೀಲಿಸಿ ವರದಿ ನೀಡಿದ ಶ್ರೀ ಹೆಚ್.ಎಸ್ ಮಂಜುನಾಥ್, ಚಾರ್ಟರ್ಡ್ ಅಕೌಂಟೆಂಟ್, ಶಿವಮೊಗ್ಗ, ಸಂಘದ ಬಡಾವಣೆ ಅಭಿವೃದ್ಧಿಗೆ ಸಹಕರಿಸಿರುವ ಇತರರಿಗೂ ಹಾಗೂ ಸಂಘವು ಅಭಿವೃದ್ಧಿ ಪಥದತ್ತ ಸಾಗಲು ಕಾರಣಕರ್ತರಾದ ಎಲ್ಲಾ ಸದಸ್ಯ ಬಂಧುಗಳಿಗೂ ಧನ್ಯವಾದಗಳು.

ಶ್ರೀ ಕೆ. ಗಂಗಾಧರಪ್ಪ

ಅಧ್ಯಕ್ಷರು

* * * *

ಮುದ್ರಿತ ವಿಷಯ

ಅಂಚೆ ದಾಖಲಾತಿಯನ್ನು ಪಡೆಯಲಾಗಿದೆ

ತೆರೆದ ಅಂಚೆ

ಇವರಿಗೆ

ಶ್ರೀಮತಿ/ಶ್ರೀ ____________________

____

____

____

ಇಂದ

ಜೆಎಸ್ಎಸ್ ಮಹಾವಿದ್ಯಾಪೀಠದ

ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ರಿ).

32, 11 ನೇ ಬ್ಲಾಕ್, ಡಾ. ರಾಜಕುಮಾರ್ ರಸ್ತೆ
ಜೆಎಸ್ಎಸ್ ಬಡಾವಣೆ, ಮೊದಲ ಹಂತ, ಮೈಸೂರು – 570029
ದೂರವಾಣಿ ಸಂಖ್ಯೆ : 0821–2470798

ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು. ಮೊ.: 9902639593

ಜೆಎಸ್‌ಎಸ್ ಮಹಾವಿದ್ಯಾಪೀಠದ
ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ರಿ).

32, 11 ನೇ ಬ್ಲಾಕ್, ಡಾ. ರಾಜಕುಮಾರ್ ರಸ್ತೆ
ಜೆಎಸ್‌ಎಸ್ ಬಡಾವಣೆ, ಮೊದಲ ಹಂತ, ಮೈಸೂರು – 570029
ದೂರವಾಣಿ ಸಂಖ್ಯೆ : 0821–2470798
ಇ–ಮೇಲ್: presidentjssmvpehbcs@gmail.com ವೆಬ್‌ಸೈಟ್: jssmvpehbcs.org
GSTIN: 29AABAJ3348QIZ2

2023–24ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ಆಹ್ವಾನ ಪತ್ರಿಕೆ

14 ಸೆಪ್ಟೆಂಬರ್ 2025 ಭಾನುವಾರ
ಬೆಳಗ್ಗೆ 10.00

ಸ್ಥಳ

ಸುವರ್ಣ ಮಹೋತ್ಸವ ಭವನ

ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ
ಮೈಸೂರು – 570 025

ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು